

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 08 | Issue : 22 | Friday 26-09-2025 | E-mail : maruti.b.hosamani76@gmail.com | Page: 4 | Price : Rs. 1/-


## ಸೊಸೈಟಿಯಲ್ಲಿ ವಾರ್ಷಿಕ ಸರ್ವ ಸಾಧಾರಣ – ಸಭೆ ಜರುಗಿತು



**ಸಿಹಿ ಕಹಿ ಸುದ್ದಿ,**
**ಯಲಗೋಡ:** ದೇವರ ಹಿಪ್ಪರಗಿ ಸಹಕಾರಿ ಬ್ಯಾಂಕುಗಳ ರೈತರ ಬೆನ್ನೆಲುಬುವಾಗಿ ಕೆಲಸ ಮಾಡುತ್ತವೆ ರೈತರಿಗೆ ವಿವಿಧ ಸೌಕರ್ಯಗಳನ್ನು ರಿಯಾಯಿತಿ ದರದಲ್ಲಿ ಹೊಲದಲ್ಲಿ ಮನೆ ಕಟ್ಟಡ ನಿರ್ಮಾಣ ಮಾಡುವ ಸಲುವಾಗಿ ಸಾಲ,ದ್ರಾಕ್ಷಿ ಸಾಲ ಹಾಗೂ ರಾಮದುರ್ಗ ತಾಲ್ಲೂಕಿನಶಿರಹಟ್ಟಿಯಲ್ಲಿನಮ್ಮಬ್ಯಾಂಕಿನವತಿಯಿಂದ ರೈತರು ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತವೆ. ವಿವಿಧ ರೀತಿಯಲ್ಲಿ ಸಾಲ ನೀಡುತ್ತವೆ ಅದನ್ನು ರೈತರು ಉಪಯೋಗ ಪಡೆಯಬೇಕು ಎಂದು ಪಿ.ಕೆ.ಪಿ.ಎಸ್ ಅಧ್ಯಕ್ಷರು ಹಾಗೂ ಈ ಸಭೆಯ ಅಧ್ಯಕ್ಷರಾದ ಸಾಯಬಣ್ಣ ಬಾಗೇವಾಡಿ ಯವರು ಹೇಳಿದರು. ದೇವರಹಿಪ್ಪರಗಿ ತಾಲ್ಲೂಕಿನ ಯಲಗೋಡ ಗ್ರಾಮದಲ್ಲಿ ಇಂದು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ 2024/25 ನೇ. ಸಾಲಿನ ವಾರ್ಷಿಕ ಸರ್ವ ಸಾಧಾರಣ ಸಭ ನಡೆಯಿತು. ಈ ಸಹಕಾರಿ ಬ್ಯಾಂಕಿನ ವಾರ್ಷಿಕ ಸಭೆಯಲ್ಲಿ ಲಾಭ ನಷ್ಟ ಖರ್ಚಿನ ಬಗ್ಗೆ ಸಹ ವಿಸ್ತಾರವಾಗಿ ಮಾಹಿತಿ ರೈತರಿಗೆ ನೀಡಿದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ಮಡಿವಾಳಪ್ಪ ಹಿಕ್ಕನಗುತ್ತಿ ಯವರು ತಿಳಿಸಿದರು ಹಾಗೂ ಈ ಸಭೆ ಯಲ್ಲಿ ಕ್ಷೇತ್ರಾಧಿಕಾರಿಗಳಾದ ಎನ್.ಜಿ ಬಿರಾದಾರ, ನಿರ್ದೇಶಕರಾದ ಬಾಬು ಕ್ಯಾತನಾಳ ಇವರು ಬ್ಯಾಂಕಿನ ಸವಲತ್ತುಗಳ ಬಗ್ಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಬಸವರಾಜ ಇಂಗಳಗಿ ನಿರ್ದೇಶಕರಾದ ರಾಜಶೇಖರಗೌಡ ಪಾಟೀಲ ಶಿವಶಂಕರ ಬೂದಿಹಾಳ ರಾಜಪಟೇಲ ಮುಚಖೇಡ ಜೆಟ್ಟೆಪ್ಪ ಕೆಂಭಾವಿ ಶಿವಪುತ್ರ ಬೂದಿಹಾಳ ಹಾಗೂ ಗ್ರಾಮ ಪಂಚಾಯತಿ ಅಧ್ಯಕ್ಷರ ಪ್ರತಿನಿಧಿಯಾದ ಚಂದ್ರಶೇಖರ ಅಸ್ಕಿ, ರೈತರಾದ ಮಂಜುನಾಥ ಕೆಂಭಾವಿ ಹಳ್ಳೆಪ್ಪ ಭೂರಗಿ ಶೇಖಪ್ಪ ಹಿರೇಕುರಬರ, ಮಹಾದೇವಪ್ಪಗೌಡ ದಂಡಪ್ಪಗೌಡ ಕರಮೀಸಾ ಕುರಿಕಾಯಿ ಬಸಪ್ಪ ಇಂಗಳಗಿ ಅಣ್ಣಪ್ಪ ತೋಟದ ಹಾಗೂ ಹಾಗೂ ಬ್ಯಾಂಕನ ಸಿಬ್ಬಂದಿಗಳಾದ ಮುರಳಿಧರ ಕುಲಕರ್ಣಿ ಮಲ್ಲಿಕಾರ್ಜುನ ಮೊಪಗಾರ ಸಂತೋಷ ನಾಟಿಕಾರ ಬೂತಾಳಿ ಇಂಗಳಗಿ ಹಾಗೂ ವಂದಾಲ, ಕದರಾಪೂರ ಗ್ರಾಮದ ರೈತರು ಈ ಕಾರ್ಯಕ್ರಮ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ. ಹಚ್ಯಾ.ದೇವರ ಹಿಪ್ಪರಗಿ**

## ತರೀಕೆರೆ ನೂತನ ಬಸ್ ನಿಲ್ದಾಣ ಶಂಕುಸ್ಥಾಪನೆ – ಸಚಿವ ರಾಮಲಿಂಗ ರೆಡ್ಡಿ

**ಸಿಹಿ ಕಹಿ ಸುದ್ದಿ,**
**ತರೀಕೆರೆ :** ಶಕ್ತಿ ಯೋಜನೆಯಲ್ಲಿ ಅತಿ ಹೆಚ್ಚು ಮಹಿಳೆಯರು ಪ್ರಯಾಣಿಸುತ್ತಿದ್ದಾರೆ 1 ಕೋಟಿ 57 ಲಕ್ಷದ 66 ಸಾವಿರ ಜನ ಕಡೂರು ಘಟಕದಲ್ಲಿ ಪ್ರಯಾಣಿಸಿರುವುದು ದಾಖಲಾಗಿದೆ ಆದ್ದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳನ್ನು ಹೆಚ್ಚು ನೀಡುತ್ತಿದ್ದೇವೆ ಎಂದು ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿ ಹೇಳಿದರು. ಅವರು ಇಂದು ಪಟ್ಟಣದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಆವರಣದಲ್ಲಿ ಏರ್ಪಡಿಸಿದ್ದ ನೂತನ ಬಸ್ ನಿಲ್ದಾಣದ ಶಂಕುಸ್ಥಾಪನೆ ನೆರವೇರಿಸಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದರು. ತರೀಕೆರೆ ಬಸ್ ನಿಲ್ದಾಣಕ್ಕಾಗಿ 9 ಕೋಟಿ 15 ಲಕ್ಷ ರೂಗಳ ವೆಚ್ಚದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣವಾಗುತ್ತಿದೆ ಮತ್ತು ಡಿಪೋ ನಿರ್ಮಾಣಕ್ಕೆ ಮೂರು ಕೋಟಿ ಅನುದಾನವನ್ನು ಕೊಟ್ಟಿರುವುದಾಗಿ ತಿಳಿಸಿದರು. ಚಿಕ್ಕಮಗಳೂರು ಶಿವಮೊಗ್ಗ ತುಮಕೂರು ಚಿತ್ರದುರ್ಗ ಜಿಲ್ಲೆಗಳಲ್ಲಿ ಖಾಸಗಿ ಬಸ್ಸುಗಳು ಹೆಚ್ಚು ಓಡಾಡುತ್ತಿವೆ ಆದ್ದರಿಂದ ಗ್ರಾಮಾಂತರ ಪ್ರದೇಶಗಳಿಗೆ ಶಾಲಾ ಮಕ್ಕಳಿಗೆ ಅನುಕೂಲವಾಗುವಂತೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಬಿಡುವುದಾಗಿ ಹೇಳಿದರು. ತರೀಕೆರೆಯಲ್ಲಿ ಎ ಆರ್ ಟಿ ಓ ಕಚೇರಿ ಕಟ್ಟಡ



ನಿರ್ಮಾಣಕ್ಕೆ ಶಾಸಕರು ಜಾಗ ಕೊಟ್ಟರೆ ಕಟ್ಟಡವನ್ನು ಕಟ್ಟಿಸಿ ಕೊಡುತ್ತೇವೆ ಎಂದು ಭರವಸೆ ನೀಡಿದರು ಈ ಕುರಿತು ತರೀಕೆರೆ ಶಾಸಕ ಜಿ ಎಚ್ ಶ್ರೀನಿವಾಸ್ ರವರು ಅಸೆಂಬ್ಲಿಯಲ್ಲೂ ಸಹ ಚರ್ಚೆ ಮಾಡಿರುವುದಾಗಿ ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕರಾದ ಜಿಎಚ್ ಶ್ರೀನಿವಾಸ್ ಮಾತನಾಡಿ, ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ಪಂಚ ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿರುವುದರಿಂದ ಜನರ ಆದಾಯ ಹೆಚ್ಚಾಗಿದ್ದು ದೇಶದಲ್ಲಿಯೇ ಕರ್ನಾಟಕ ಎರಡನೇ ಸ್ಥಾನದಲ್ಲಿದೆ ಎಂಟು ಕೋಟಿ ರೂ ಅನುದಾನದಲ್ಲಿ ಪುರಸಭಾ ಕಟ್ಟಡ ನಿರ್ಮಾಣವಾಗುತ್ತಿದೆ, ಒಂದು ಕೋಟಿ ಅನುದಾನದಲ್ಲಿ ಬೈಲು ರಂಗ ಮಂದಿರ ನಿರ್ಮಾಣವಾಗುತ್ತಿದೆ. ತರೀ–ಕೆರೆ ಕ್ಷೇತ್ರ ಅಭಿವೃದ್ಧಿಗೆ ಸಾವಿರಾರು ಕೋಟಿ ಹಣವನ್ನು ನೀರಾವರಿ ಸಚಿವರು ನೀಡಿದ್ದು ಅಭಿವೃದ್ಧಿ ಕಾರ್ಯಕ್ರಮಗಳು ತುಂಬಾ ನಡೆಯುತ್ತಿದೆ ಆದರೆ ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟಕ್ಕೆ ಬಸ್ಸುಗಳ ವ್ಯವಸ್ಥೆ ಆಗಬೇಕಾಗಿದೆ ಅದೇ ರೀತಿ ಅಜ್ಜಂಪುರ, ಶಿವನಿ, ಬುಕ್ಕಾಂಬುದಿಗೆ ಗ್ರಾಮಾಂತರ ಬಸ್ಸುಗಳು ತರೀಕೆರೆಯಿಂದ ಬೆಟ್ಟದಹಳ್ಳಿ, ಕೋರನಹಳ್ಳಿ, ಬೀರೂರು ಮತ್ತು ಕಡೂರು ಮಾರ್ಗದಲ್ಲಿ ಗ್ರಾಮಾಂತರ ಬಸ್ಸುಗಳು ಅವಶ್ಯಕತೆ ಇದೆ. ತರೀಕೆರೆ ಬಸ್ ನಿಲ್ದಾಣಕ್ಕೆ ಸಂಗೊಳ್ಳಿ ರಾಯಣ್ಣ ಬಸ್ ನಿಲ್ದಾಣ ನಾಮಕರಣ ಮಾಡಬೇಕು ಎಂದು ಹೇಳಿದರು. ಕೆ ಹೊಸೂರಿನಲ್ಲಿ ಡಿಪೋ ನಿರ್ಮಾಣಕ್ಕೆ ಎಷ್ಟೇ ಅಡೆ ತಡೆಗಳು ಬಂದರೂ ನಿವಾರಿಸಿ ಡಿಪೋ ನಿರ್ಮಾಣ ಮಾಡಲು ಇಂದು ಚಾಲನೆ ಸಿಕ್ಕಿದೆ ಎಂದು ಹೇಳಿದರು. ಪುರಸಭಾ ಅಧ್ಯಕ್ಷರಾದ ವಸಂತ್ ಕುಮಾರ್ ಕವಾಲಿ ಮಾತನಾಡಿ ಹಲವಾರು ವರ್ಷಗಳ ಬೇಡಿಕೆ ಇಂದು ನೆರವೇರುತಿದೆ ಬಿ ಎಚ್ ರಸ್ತೆ ಅಭಿವೃದ್ಧಿ ಕಾಮಗಾರಿಯು ನಡೆಯುತ್ತಿದೆ ಈ ಎಲ್ಲಾ ಅಭಿವೃದ್ಧಿ ಕಾಮಗಾರಿಗಳಿಗೆ ಕಾರಣ–ರಾದ ಶಾಸಕರಿಗೆ ಧನ್ಯವಾದಗಳು ಎಂದು ಹೇಳಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹೆಚ್ ಯು ಫಾರೂಕ್ ಮಾತನಾಡಿ 56 ಸಾವಿರ ಕೋಟಿ ಅನುದಾನದಲ್ಲಿ ಬಿ ಹೆಚ್ ರಸ್ತೆ ಕಾಮಗಾರಿ ನಿರ್ಮಾಣವಾಗುತ್ತಿದ ಮಾನ್ಯ ಸಾರಿಗೆ ಸಚಿವರು ಗ್ರಾಮಾಂತರ ಶಾಲಾ ಮಕ್ಕಳಿಗೆ ಬಸ್ಸುಗಳ ವ್ಯವಸ್ಥೆ ಮಾಡಿಕೊಡಬೇಕು ಎಂದು ಮನವಿ ಮಾಡಿದರು ಹಾಗೂ ಮಾನ್ಯ ರಾಮಲಿಂಗಾರೆಡ್ಡಿ ಸಾಹೇಬರು ಎಂಟು ಬಾರಿ ಸತತವಾಗಿ ಶಾಸಕರಾಗಿ ಆಯ್ಕೆಯಾಗಿದ್ದಾರೆ ಜನಪ್ರಿಯ ಶಾಸಕರು ಸಚಿವರು ಆಗಿದ್ದಾರೆ ಎಂದು ತಿಳಿಸಿದರು. ವೇದಿಕೆಯಲ್ಲಿ ಸಾರಿಗೆ ನಿಗಮದ ನಿರ್ದೇಶಕರಾದ ಇಬ್ರಾಹಿಂ ಮೈಗೂರ, ಪುರಸಭಾ ಉಪಾಧ್ಯಕ್ಷರಾದ ಪಾರ್ವತಮ್ಮ ತಿಮ್ಮಯ್ಯ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಅಂಜಯ್ಯ ಅನಿಲ್ ಕುಮಾರ್ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಹೆಚ್ ವಿಶ್ವನಾಥ್ ಪುರಸಭಾ ಮಾಜಿ ಅಧ್ಯಕ್ಷರಾದ ಪ್ರಕಾಶ್ ವರ್ಮಾ ಅಜ್ಜಂಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ದಯಾನಂದ, ಬಗರ್ ಹುಕುಂ ಸಮಿತಿ ಸದಸ್ಯರಾದ ಜಗದೀಶ್, ನೌಕರ ಸಂಘದ ಅಧ್ಯಕ್ಷರಾದ ಅನಂತಪ್ಪ, ಅಜ್ಜಂಪುರ ನೌಕರರ ಸಂಘದ ಅಧ್ಯಕ್ಷರಾದ ಪುಟ್ಟಸ್ವಾಮಿ, ತರೀಕೆರೆ ಪುರಸಭಾ ಮಾಜಿ ಅಧ್ಯಕ್ಷರಾದ ಟಿ ಎಸ್ ರಮೇಶ್, ತಾಲೂಕು ಗ್ಯಾ–ರೆಂಟಿ ಸಮಿತಿ ಸದಸ್ಯರಾದ ಎಚ್ ಎಸ್ ಮೆಹಬೂಬ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಭಾಗ್ಯಲಕ್ಷ್ಮಿ ಉಪಸಿತರಿದ್ದು ಸಾರಿಗೆ ನಿಗಮದ ಸಹಾಯಕ ಲೆಕ್ಕಾಧಿಕಾರಿಯದ ಕೆ ಜೆ ಜಯಣ್ಣ ಸ್ವಾಗತಿಸಿ ಶಾರದ ರವರು ಪ್ರಾರ್ಥಿಸಿದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್ ತರೀಕೆರೆ ಚಿಕ್ಕಮಗಳೂರು**

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ

## ಯೋಜನೆಗಳ ಸೌಲಭ್ಯ ತಲುಪಿಸುವ ಕಾರ್ಯವಾಗಲಿ: ಡಿಸಿ

**ಬಾಗಲಕೋಟೆ :** ವಿವಿಧ ಇಲಾಖೆಯ ಸಹಭಾಗಿತ್ವದಲ್ಲಿ ಮಹಿಳೆ ಮತ್ತು ಮಕ್ಕಳಿಗಾಗಿ ಇರುವ ಸರ್ಕಾರದ ಯೋಜನೆಯಗಳನ್ನು ಅರ್ಹ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತಲುಪಿಸುವ ಕಾರ್ಯವಾಗಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚಿಸಿದರು.



ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಾಂತ್ವನ ಕೇಂದ್ರಗಳ ಬಗ್ಗೆ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ತಿಳಿವಳಿಕೆ ಮೂಡಿಸಲು ಕ್ರಮ ಕೈಗೊಳ್ಳುವ ಕೆಲಸ ಸಂಸ್ಥೆಗಳಾಗಿದೆ. ಪ್ರಧಾನ ಮಂತ್ರಿ ಮಾತೃ ವಂದನ ಯೋಜನೆಯಡಿ ಗರ್ಭಿಣಿ ಮಹಿಳೆಯರಿಗೆ ನೀಡಲಾಗುತ್ತಿರುವ ಸಹಾಯ ಧನವು ಸಮರ್ಪಕವಾಗಿ ಬಳಕೆಯಾಗುತ್ತಿರುವ ಬಗ್ಗೆ ಪರಿಶೀಲಿಸಬೇಕು. ಗರ್ಭಿಣಿ ಮಹಿಳೆಯರು ಪೌಷ್ಠಿಕ ಆಹಾರ ಸೇವಿಸಲು ಅಂಗನವಾಡಿ ಕಾರ್ಯಕರ್ತರು ಮನವರಿಕೆ ಮಾಡಬೇಕು.

ಜೊತೆಗೆ ಪ್ರತಿ ಗರ್ಭಿಣಿಯರಿಗೂ ಪರೀಕ್ಷೆ ನಡೆಸಿ, ಹತ್ತಕ್ಕಿಂತ ಕಡಿಮೆ ಇರುವ ಹಿಮೋಗ್ಲೋಬಿನ್ ಇರುವ ಮಹಿಳೆಯರಿಗೆ ಆರೋಗ್ಯದ ಅರಿವು ಮೂಡಿಸಬೇಕು ಎಂದರು.

ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ಪ್ರತಿ ದಿನ ಮೊಟ್ಟೆಯನ್ನು ವಿತರಿಸುವ ಬಗ್ಗೆ ಅನುದಾನ ಹಾಗೂ ಅನುಮತಿಗಾಗಿ ಪ್ರಸ್ತಾವನೆವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದರು. ಅಪೌಷ್ಠಿಕತೆಯನ್ನು ಜಿಲ್ಲೆಯಿಂದ ಹೋಗಲಾಡಿಸುವಲ್ಲಿ ಕಾರ್ಯ ಪ್ರವೃತರಾಗುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಕಿ ಕೇಂದ್ರಗಳಲ್ಲಿ ಸಿಸಿಟಿವಿಗಳನ್ನು ಅಳವಡಿಸಿ ಅವನ್ನು ಪೊಲೀಸ್ ಠಾಣೆಗೆ ಲಿಂಕ್ ಮಾಡಬೇಕೆಂದು ಹಾಗೂ ಪ್ರತಿದಿನ ರಾತ್ರಿ ಪೊಲೀಸ್ ಬೀಟ್ ಹಾಕುವ ವ್ಯವಸ್ಥೆ ಮಾಡಬೇಕೆಂದರು.

ಜಿಲ್ಲಾಪಂಚಾಯತಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ ಜಿಲ್ಲೆಯ ಎಲ್ಲ ಅಂಗನವಾಡಿ ಕೇಂದ್ರಗಳಿಗೆ ಇಲಾಖೆಯ ಕಟ್ಟಡ ನಿರ್ಮಾಣ ಮಾಡಲು ನಗರ ಹಾಗೂ ಗ್ರಾಮೀಣಪ್ರದೇಶದಲ್ಲಿನಿವೇಶಗಳನ್ನುಗುರುತಿಸಿ ಇಲಾಖೆಗೆ ಹಸ್ತಾಂತರ ಮಾಡಿಕೊಳ್ಳಲು ಅಗತ್ಯ ಕ್ರಮವಹಿಸಲು ಸೂಚಿಸಿದರು.

ಎಲ್ಲ ಅಂಗನಾವಡಿ ಕೇಂದ್ರಗಳಿಗೆ ಶೌಚಾಲಯ, ವಿದ್ಯುತ, ಫ್ಯಾನ್, ನೀರು ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಹಾಗೂ ಕಾಲ ಕಾಲಕ್ಕೆ ಅಂಗನವಾಡಿ ಕೇಂದ್ರಗಳಿಗೆ ಬೇಟಿ ನೀಡುವಂತೆ ಶಿಶು ಅಭಿವೃದ್ಧಿ ಯೋಜನಾಧಿಕಾ–ರಿಗಳಿಗೆ ಸೂಚಿಸಿದರು. ಈ ಕುರಿತು ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳು ಮೇಲ್ವಿಚಾರಣೆ ಮಾಡಲು ತಿಳಿಸಿದರು.

ಸದರಿ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪ್ರಭಾಕರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಂಜುನಾಥ ಡಿ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಜಿಲ್ಲಾ ನಿರೂಪಣಾಧಿಕಾರಿ ಮಂಜುನಾಥ ಪರಸನ್ನವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಸುಮಂಗಲಾ ಹಿರೇಮನಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಾ.ವೀಣಾ ಸೇರಿದಂತೆ ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಉಪಸ್ಥಿತರಿದ್ದರು.

## ದಸರಾ ಉತ್ಸವದಲ್ಲಿ ಭರತನಾಟ್ಯಕ್ಕೆ ದೀಕ್ಷಾ ಆಯ್ಕೆ

**ರಬಕವಿ–ಬನಹಟ್ಟಿ :** ನಗರದ ಭರತನಾಟ್ಯ ಬಾಲ ಕಲಾವಿದೆ ದೀಕ್ಷಾ ಕೊಣ್ಣೂರ ಮೈಸೂ–ರಿನಲ್ಲಿ ಸಪ್ಟೆಂಬರ್ 27 ರಂದು ಜರುಗುವ ದಸರಾ ಉತ್ಸವದಲ್ಲಿ ಭರತನಾಟ್ಯ ಪ್ರದರ್ಶನ ನೀಡಲು ಆಯ್ಕೆಯಾಗಿದ್ದು ಈ ಬಾಲ ಪ್ರತಿಭೆಯು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಬಿ. ಕೆ. ಜೋತಾವರ ಕನ್ನಡ ಪ್ರಾಥಮಿಕ ಶಾಲೆಯ ಐದನೇ ವರ್ಗದ ವಿದ್ಯಾರ್ಥಿನಿಯಾಗಿದ್ದು ಇವಳಿಗೆ ಶಾಲೆಯ ಮುಖ್ಯ ಗುರುಗಳು, ಸಿಬ್ಬಂದಿ ವರ್ಗ ಹಾಗೂ ನಗರದ ಸಮಸ್ತ ಗುರು ಹಿರಿಯರು ಅಭಿನಂದನೆ ಸಲ್ಲಿಸಿದ್ದಾರೆ.



## ರಾಜ್ಯ ಮಟ್ಟದ ಕವಿಗೋಷ್ಠಿಗೆ ಕವನಗಳ ಆಹ್ವಾನ

**ಬೈಲಹೊಂಗಲ :** ಕೇಂದ್ರ ಬಸವ ಸಮಿತಿ ಬೆಂಗಳೂರು ಇವರ ವತಿಯಿಂದ ಕನ್ನಡ ರಾಜ್ಯೋತ್ಸವ ನಿಮಿತ್ಯ ಕಿತ್ತೂರ ಚೆನ್ನಮ್ಮಾ–ಜಿಯವರ ಐಕ್ಯ ಕ್ಷೇತ್ರವಾದ ಬೈಲಹೊಂಗಲ ಪಟ್ಟಣದಲ್ಲಿ ನವೆಂಬರ ತಿಂಗಳಲ್ಲಿ ರಾಜ್ಯ ಮಟ್ಟದ ಕವಿಗೋಷ್ಠಿ ಆಯೋಜಿಸಲಾಗಿದೆ.

ಈ ನಿಮಿತ್ಯ ಉದಯೋನ್ಮುಖ ಹಾಗೂ ಪ್ರತಿಭಾವಂತ ಕವಿಗಳಿಂದ ಕನ್ನಡ ನಾಡು, ನುಡಿ, ನೆಲ, ಜಲ, ಭಾಷೆಯ ಕುರಿತು, ಅನ್ನ ನೀಡುವ ಅನ್ನದಾತ ಹಾಗೂ ದೇಶ ಕಾಯುವ ಯೋಧರ ಕುರಿತು, ಕರ್ನಾಟಕದ ಸಾಂಸ್ಕೃತಿಕ ನಾಯಕ, ಮಹಾನ್ ದಾರ್ಶನಿಕ ಬಸವಣ್ಣ, ಇತರ ಶರಣರ ಕುರಿತು ಮತ್ತು ಶರಣ ಸಂಸ್ಕೃತಿಯನ್ನು ಉಳಿಸಲು, ಬೆಳೆಸಲು ಶ್ರಮಿಸಿದವರ ಕುರಿತು ಕವನಗಳನ್ನು ಆಹ್ವಾನಿಸಲಾಗಿದೆ.

ಕವನ ಮೂವತ್ತು ಸಾಲುಗಳಿಗೆ ಮೀರದಂತೆ ಕಾಗದದ ಒಂದೇ ಮಗ್ಗುಲಲ್ಲಿ ಬರೆದು ಅಥವಾ ಡಿಟಿಪಿ ಮಾಡಿಸಿ, ಸ್ವವಿಳಾಸ, ಕಿರು ಪರಿಚಯ, ಭಾವಚಿತ್ರ, ವ್ಯಾಟ್ಸಪ್ ಮೊಬೈಲ್ ಸಂಖ್ಯೆಯೊಂದಿಗೆ ಅಕ್ಟೋಬರ್ 15 ರ ಒಳಗಾಗಿ ಮೋಹನ ಬಸನಗೌಡ ಪಾಟೀಲ, ಕಾರ್ಯಕಾರಿ ಸಮಿತಿಯ ಸದಸ್ಯರು, ಬಸವ ನಿವಾಸ, ಚನ್ನಮ್ಮ ನಗರ ಮೊದಲನೆಯ ಅಡ್ಡ ರಸ್ತೆ, ಬೈಲಹೊಂಗಲ–591102, ಬೆಳಗಾವಿ ಜಿಲ್ಲೆ ಈ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಕಳಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 9448920888 ಸಂಪರ್ಕಿಸಬೇಕೆಂದು ಕೇಂದ್ರ ಬಸವ ಸಮಿತಿಯ ಅಧ್ಯಕ್ಷ ಡಾ. ಅರವಿಂದ ಜತ್ತಿ ಅವರು ತಿಳಿಸಿದ್ದಾರೆ.

## ನಗರ ಸಭೆ ಅಧಿಕಾರಿಗಳ ನಿರ್ಲಕ್ಷ್ಯ, ಇ–ಖಾತಾ ಅರ್ಜಿಗಳ ವಿಳಂಬ–ಸಾರ್ವಜನಿಕರ ಪರದಾಟ

**ಸಿಹಿ ಕಹಿ ಸುದ್ದಿ,**
**ಉಡುಪಿ :** ನಗರ ಸಭೆಯ ಕಚೇರಿಗಳಲ್ಲಿ ನಡೆಯುತ್ತಿರುವ ವಿಳಂಬ ಮತ್ತು ನಿರ್ಲಕ್ಷ್ಯದಿಂದಾಗಿ ಸಾರ್ವಜನಿಕರು ತೀವ್ರ ತೊಂದ–ರೆ ಅನುಭವಿಸುತ್ತಿದ್ದಾರೆ. ಪ್ರಜಾಪ್ರಭುತ್ವದ ಆಡಳಿತದಲ್ಲಿ ಪ್ರಜೆಗಳಿಗೆ ಸಕಾಲಿಕವಾಗಿ ಸೇವೆಗಳನ್ನು ಒದಗಿಸುವುದು ಅಧಿಕಾರಿಗಳ ಕರ್ತವ್ಯವಾಗಿದ್ದರೂ, ಉಡುಪಿ ನಗರ ಸಭೆಯಲ್ಲಿ ಈ ನಿಯಮ ಗಾಳಿಗೆ ತೂರಿದಂತೆ ಕಾಣುತ್ತಿದೆ. ಇ–ಖಾತಾಕ್ಕೆ ಅರ್ಜಿ ಸಲ್ಲಿಸಿದ ನಾಗರಿಕರು 45 ದಿನಗಳಾದರೂ ಖಾತಾ ಪಡೆಯಲು ಸಾಧ್ಯವಾಗದೇ ಕಚೇರಿಗಳಿಗೆ ಅಲೆದಾಡುತ್ತಿದ್ದಾರೆ. ಇದಕ್ಕೆ ಕಾರಣ ಅಧಿಕಾರಿಗಳ ಬೇಜವಾಬ್ದಾರಿತನ ಮತ್ತು ಲಂಚಗುಳಿತನ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.




**ನಿಯಮಗಳ ಉಲ್ಲಂಘನೆ:**
ಉಡುಪಿ ನಗರಸಭೆಯ ನಿಯಮಗಳ ಪ್ರಕಾರ, ಇ–ಖಾತಾಕ್ಕೆ ಅರ್ಜಿ ಸಲ್ಲಿಸಿದ 45 ದಿನಗಳೊಳಗೆ ಖಾತಾವನ್ನು ಅರ್ಜಿದಾರರಿಗೆ ನೀಡಬೇಕು. ಆದರೆ, ಈ ನಿಯಮ ಕೇವಲ ಕಾಗದದ ಮೇಲೆ ಮಾತ್ರ ಇದೆ ಎಂದು ಸಾರ್ವಜನಿಕರು ಹೇಳುತ್ತಾರೆ. ಕಿನ್ನಿಮುಲ್ಕಿ ವಾರ್ಡಿಗೆ ಸೇರಿದ ಒಬ್ಬ ಅರ್ಜಿದಾರರು ತಮ್ಮ ವೈಯಕ್ತಿಕ ಖಾತೆಗೆ ಅರ್ಜಿ ಸಲ್ಲಿಸಿ 45 ದಿನಗಳಿಗಿಂತ ಹೆಚ್ಚು ಸಮಯ ಕಳೆದರೂ ಖಾತಾ ದೊರೆತಿಲ್ಲ ಎಂದು ಹೇಳಿಕೊಂಡಿದ್ದಾರೆ. ಈ ಕುರಿತು ಅವರು ಎರಡು ಮೂರು ಬಾರಿ ಕಚೇರಿಗೆ ಭೇಟಿ ನೀಡಿ ವಿಚಾರಿಸಿದಾಗ, ಸಂಬಂಧಪಟ್ಟ ಕೇಸ್ ವರ್ಕರ್ "ಫೋನ್ ಮಾಡುತ್ತೇವೆ" ಎಂದು ಹೇಳಿ ಕಳುಹಿಸಿದ್ದಾರೆ. ಆದರೆ, ಇದುವರೆಗೆ ಯಾವುದೇ ಫೋನ್ ಕರೆ ಬಂದಿಲ್ಲ ಮತ್ತು ಖಾತಾದ ಬಗ್ಗೆ ಯಾವುದೇ ಮಾಹಿತಿಯೂ ಲಭ್ಯವಾಗಿಲ್ಲ.

ಅಧ್ಯಕ್ಷರ ಮಾತಿಗೂ ಕವಡೆ ಕಾಸಿನ ಕಿಮ್ಮತ್ತಿಲ್ಲ
ಈ ವಿಷಯವನ್ನು ಉಡುಪಿ ನಗರಸಭೆಯ ಅಧ್ಯಕ್ಷರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಕೇಸ್ ವರ್ಕರ್‌ಗಳು ಮತ್ತು ಬಿಲ್ ಕಲೆಕ್ಟರ್‌ಗಳು ಅಧ್ಯಕ್ಷರ ಮತ್ತು ವಾರ್ಡ್ ಸದಸ್ಯರ ಮಾತುಗಳಿಗೆ ಕಿಂಚಿತ್ತೂ ಗೌರವ ಕೊಡುವುದಿಲ್ಲ ಎಂದು ಅರ್ಜಿದಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ರೀತಿಯ ನಿರ್ಲಕ್ಷ್ಯವು ನಗರಸಭೆಯಲ್ಲಿ ಆಂತರಿಕವಾಗಿ ಗಂಭೀರ ಸಮಸ್ಯೆಗಳನ್ನು ಸೂಚಿಸುತ್ತದೆ. ಈ ಪರಿಸ್ಥಿತಿಯ ಹಿಂದೆ ನಗರಸಭೆ ಕಮಿಷನರ್ ಅವರ ಹಸ್ತಕ್ಷೇಪವಿದೆಯೇ ಎಂಬ ಅನುಮಾನ ಕೂಡ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

ಸಮಸ್ಯೆಗೆ ಶಾಶ್ವತ ಪರಿಹಾರ ಬೇಕು
ಈ ರೀತಿಯ ನಿರ್ಲಕ್ಷ್ಯದಿಂದಾಗಿ ಕಚೇರಿಗಳಲ್ಲಿ ಸಾರ್ವಜನಿಕರನ್ನು ಅಲೆದಾಡಿಸುವುದು ಮತ್ತು ಅವರಿಗೆ ತೊಂದರೆ ನೀಡುವುದು ಸಾಮಾನ್ಯವಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದು ಅಗತ್ಯವಾಗಿದೆ. ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಕೂಡಲೇ ಈ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರ ಕೆಲಸಗಳನ್ನು ಸಕಾಲದಲ್ಲಿ ಪೂರ್ಣಗೊಳಿಸುವ ಜವಾಬ್ದಾರಿಯನ್ನು ಅಧಿಕಾರಿಗಳಿಗೆ ವಹಿಸಬೇಕು ಮತ್ತು ಅವರು ವಿಫಲವಾದಲ್ಲಿ ಅವರನ್ನು ಕೂಡಲೇ ಸೇವೆಯಿಂದ ಅಮಾನತುಗೊಳಿಸಬೇಕು. ಈ ರೀತಿಯ ಕಠಿಣ ಕ್ರಮಗಳು ಮಾತ್ರ ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ತಡೆಯಬಹುದು. ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಕೈಗೊಳ್ಳಬಹುದಾದ ಕಾನೂನು ಕ್ರಮಗಳು ನಾಗರಿಕ ಸೇವೆಗಳಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದಾಗ, ಅವರ ವಿರುದ್ಧ ವಿವಿಧ ರೀತಿಯಲ್ಲಿ ಕಾನೂನು ಕ್ರಮ ಕೈಗೊಳ್ಳಬಹುದು. ಈ ಕ್ರಮಗಳು ಅಧಿಕಾರಿಯ ಸ್ಥಾನ, ನಿರ್ಲಕ್ಷ್ಯದ ಸ್ವರೂಪ ಮತ್ತು ಉಂಟಾದ ತೊಂದರೆಯ ಮಟ್ಟವನ್ನು ಅವಲಂಬಿಸಿರುತ್ತವೆ. ಇಂತಹ ಸಂದರ್ಭಗಳಲ್ಲಿ, ಒಬ್ಬ ವ್ಯಕ್ತಿಯು ಯಾವ ಕ್ರಮಗಳನ್ನು ಕೈಗೊಳ್ಳಬಹುದು ಎಂಬುದರ ಬಗ್ಗೆ ಇಲ್ಲಿ ವಿವರಿಸಲಾಗಿದೆ.

ಸೇವೆಯಲ್ಲಿ ನಿರ್ಲಕ್ಷ್ಯಕ್ಕೆ ಸಂಬಂಧಿಸಿದ ಕಾನೂನು ಕ್ರಮಗಳು
ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ವಿಫಲವಾದಾಗ ಈ ಕೆಳಗಿನ ಕಾನೂನು ಕ್ರಮಗಳನ್ನು ಕೈಗೊಳ್ಳಬಹುದು.

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 (ಏಚಿಡಿಟಿಚಿಣಚಿಞಚಿ ಖಚಿಞಚಿಟಚಿ ಖಜಡಿತುಛಿಜ ಂಛಿಣ, 2011): ಈ ಕಾನೂನಿನ ಪ್ರಕಾರ, ಸರ್ಕಾರಿ ಸೇವೆಗಳನ್ನು ನಿರ್ದಿಷ್ಟ ಅವಧಿಯೊಳಗೆ ಒದಗಿಸುವುದು ಕಡ್ಡಾಯ. ಇ–ಖಾತಾ ವಿತರಣೆಯೂ ಈ ಕಾಯಿದೆಯ ವ್ಯಾಪ್ತಿಗೆ ಬರುತ್ತದೆ. ಒಂದು ವೇಳೆ ಅಧಿಕಾರಿಗಳು ನಿಗದಿತ ಸಮಯದಲ್ಲಿ ಸೇವೆಯನ್ನು ಒದಗಿಸದಿದ್ದರೆ, ಅರ್ಜಿದಾರರು ಈ ಕಾಯಿದೆಯ ಅಡಿಯಲ್ಲಿ ಮೇಲ್ಮನವಿ ಸಲ್ಲಿಸಬಹುದು. ಮೊದಲಿಗೆ, ಸಂಬಂಧಿಸಿದ ಅಧಿಕಾರಿಯ ಹಿರಿಯ ಅಧಿಕಾರಿಗೆ (ಉದಾ. ನಗರಸಭೆ ಆಯುಕ್ತರು) ಲಿಖಿತವಾಗಿ ದೂರು ಸಲ್ಲಿಸಬಹುದು.

ಒಂದು ವೇಳೆ ಹಿರಿಯ ಅಧಿಕಾರಿಯೂ ಕ್ರಮ ಕೈಗೊಳ್ಳದಿದ್ದರೆ, 'ಸಕಾಲ ಮಿಷನ್' (ಖಚಿಞಚಿಟಚಿ ಒಡಿಂಟ) ವೆಬ್ಸೈಟ್ ಅಥವಾ ಕಚೇರಿಯಲ್ಲಿ ನೇರವಾಗಿ ದೂರು ಸಲ್ಲಿಸಬಹುದು. ದೂರಿನ ನಂತರವೂ ಕೆಲಸ ಆಗದಿದ್ದರೆ, ಪ್ರತಿ ದಿನದ ವಿಳಂಬಕ್ಕೆ ?20 ದಂಡ ವಿಧಿಸುವಂತೆ ಕೋರಬಹುದು. ಈ ದಂಡವನ್ನು ನಿರ್ಲಕ್ಷ್ಯ ತೋರಿದ ಅಧಿಕಾರಿಯ ವೇತನದಿಂದ ಕಡಿತಗೊಳಿಸಲಾಗುತ್ತದೆ.

ಲಂಚ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಕಾನೂನು ಕ್ರಮಗಳು
ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟರೆ ಅಥವಾ ಲಂಚ ಸ್ವೀಕರಿಸಿದರೆ, ಅದು ಕಾನೂನುಬಾಹಿರ ಕೃತ್ಯವಾಗಿದ್ದು, ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು.

ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (Prevention of Corruption Act, 1988)
ಲೋಕಾಯುಕ್ತ/ಎಸಿಬಿ (ಐಂಞಚಿಥಿಣಞ–ಣಚಿ/ಂಅಃ) ಕರ್ನಾಟಕದಲ್ಲಿ ಭ್ರಷ್ಟಾಚಾರದ ದೂರುಗಳನ್ನು ದಾಖಲಿಸಲು ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ಅಧಿಕಾರ ಹೊಂದಿದೆ. ಲಂಚಕ್ಕೆ ಬೇಡಿಕೆ ಇಟ್ಟ ಅಥವಾ ಲಂಚ ಸ್ವೀಕರಿಸಿದ ಅಧಿಕಾರಿಯ ವಿರುದ್ಧ ಲಿಖಿತ ದೂರು ಸಲ್ಲಿಸಬಹುದು. ಲೋಕಾಯುಕ್ತರು ದೂರಿನ ಆಧಾರದ ಮೇಲೆ ತನಿಖೆ ನಡೆಸಿ, ಅಧಿಕಾರಿಯನ್ನು ಬಂಧಿಸಬಹುದು ಮತ್ತು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬಹುದು.

ಸೇವಾ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ಕ್ರಮಗಳು ಪ್ರತಿ ಸರ್ಕಾರಿ ನೌಕರನೂ ಕೆಲವು ಸೇವಾ ನಿಯಮಗಳನ್ನು ಪಾಲಿಸಬೇಕು. ಸಾರ್ವಜನಿಕರೊಂದಿಗೆ ದುರ್ವರ್ತನೆ, ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನ ತೋರಿದಾಗ ಈ ನಿಯಮಗಳ ಉಲ್ಲಂಘನೆಯಾಗುತ್ತದೆ.

**ಸೇವಾ ನಿಯಮಗಳ ಅಡಿಯಲ್ಲಿ ಶಿಸ್ತುಕ್ರಮ:**
ನಿರ್ಲಕ್ಷ್ಯ ತೋರಿದ ಅಧಿಕಾರಿಯ ವಿರುದ್ಧ ಅವರ ಉನ್ನತ ಅಧಿಕಾರಿಗಳು ವಿಭಾಗೀಯ ತನಿಖೆ (Departmental Enquiry) ನಡೆಸಬಹುದು. ಈ ತನಿಖೆಯ ಆಧಾರದ ಮೇಲೆ, ಅಧಿಕಾರಿಗೆ ಎಚ್ಚರಿಕೆ, ವೇತನ ಕಡಿತ, ಬಡ್ತಿ ತಡೆಹಿಡಿಯುವುದು ಅಥವಾ ಅಮಾನತುಗೊಳಿಸುವುದು (Suspension) ನಂತಹ ಶಿಕ್ಷೆಗಳನ್ನು ನೀಡಬಹುದು. ಗಂಭೀರ ಪ್ರಕರಣಗಳಲ್ಲಿ, ಸೇವೆಯಿಂದ ವಜಾಗೊಳಿಸುವ ಸಾಧ್ಯತೆಯೂ ಇರುತ್ತದೆ.

**ವರದಿ:ಆರತಿ.ಗಿಳಿಯಾರು.ಉಡುಪಿ**

### ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳ ಪ್ರಗತಿ ಪರಿಶೀಲನೆ

# ಮಕ್ಕಳಲ್ಲಿ ಬರವಣಿಗೆ ಕೌಶಲ್ಯ, ಏಕಾಗ್ರತೆ ಹೆಚ್ಚಿಸಿ: ಕುರೇರ್



**ಬಾಗಲಕೋಟೆ:** ಕೆಲವು ವಿದ್ಯಾರ್ಥಿಗಳು ಮೌಖಿಕವಾಗಿಉತ್ತರನೀಡುತ್ತಾರೆ ಹೊರತು ಬರೆಯುವಲ್ಲಿ ಕಷ್ಟ ಪಡುತ್ತಿದ್ದಾರೆ. ಅಂತಹವರನ್ನು ಗುರುತಿಸಿ ದಿನನಿತ್ಯ ಶಾಲೆಗಳಲ್ಲಿ ' ಬರವಣಿಗೆಕೌಶಲ್ಯ ಮತ್ತುಏಕಾಗ್ರತೆ ಹೆಚ್ಚಿಸುವ ಕೆಲಸವನ್ನು ಶಿಕ್ಷಕರು ಮಾಡಬೇಕುಎಂದುಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಶಶಿಧರ ಕುರೇರ್‌ಹೇಳಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಗುರುವಾರಉಪನಿರ್ದೇಶಕರಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆ ಬಾಗಲಕೋಟೆಇವರ ವತಿಯಿಂದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳ ಪ್ರಗತಿ ಪರಿಶೀಲನಾ ಅಧ್ಯಕ್ಷತೆ ವಹಿಸಿ ಮಾತನಾಡಿದಅವರು ಲ್ಯಾಬ್, ಸ್ಮಾರ್ಟ್ ಬೋರ್ಡ್ ಸೇರಿದಂತೆ ಶಾಲೆಯಲ್ಲಿನ ಸೌಲಭ್ಯಗಳನ್ನು ಸಂಪೂರ್ಣವಾಗಿ ಮಗುವಿನ ಪ್ರಗತಿಗೆ ಬಳಸಿಕೊಳ್ಳಿ, ತರಗತಿಯ ಪ್ರತಿ ಮಗುವಿನ ಕುರಿತು ಶಿಕ್ಷಕರಿಗೆ ಸಂಪೂರ್ಣ ಮಾಹಿತಿಇರತಕ್ಕದ್ದು, ಅಣಕು ಪರೀಕ್ಷೆ, ಮಾದರಿ ಪ್ರಶ್ನೋತ್ತರಗಳನ್ನು ಬರೆಯಿಸುವುದರಜೊತೆಗೆ ಓದಿಸುವ ರೂಡಿ ಸಹ ನೆನಪಿಡಲೂಸಹಾಯವಾಗುತ್ತದೆಎಂದರು.

ಅಧಿಕಾರಿಗಳು ತಮಗೆ ನೀಡಿದದತ್ತು ಶಾಲೆಗಳಿಗೆ ಭೇಟಿ ನೀಡಿಅಲ್ಲಿನ ಪ್ರಗತಿಕುರಿತು ವರದಿ ಸಲ್ಲಿಸಬೇಕು.ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ವೈಯಕ್ತಿಕ ಪ್ರಗತಿ, ಶಾಲೆಯ ಸ್ಥಿತಿಗತಿ, ಶಿಕ್ಷಕರ ಕುರಿತು ಸಂಪೂರ್ಣ ವರದಿ ನೀಡಬೇಕು.ಅಧಿಕಾರಿಗಳ ಭೇಟಿಯಿಂದ ಶಾಲೆಗಳಲ್ಲಿ ಬದಲಾವಣೆ ಸಾಧ್ಯ.ಶಿಕ್ಷಕರು ಅನಾವಶ್ಯಕ ಸಭೆಗಳನ್ನು, ರಜೆಗಳನ್ನು ಬಿಟ್ಟು ಮಕ್ಕಳ ಮತ್ತು ಶಾಲೆಯ ಪ್ರಗತಿಯತ್ತ ಗಮನ ಹರಿಸಬೇಕುಎಂದರು.

ಸೋಶಿಯಲ್ ಮೀಡಿಯಾ ನಿಷೇಧದಿಂದದೇಶವೊಂದರ ಆಡಳಿತವೇ ತಲೆಕೆಳಗಾದ ಉದಾಹರಣೆ ನೀಡುತ್ತ, ಮಕ್ಕಳಲ್ಲಿನ ಮೊಬೈಲ್‌ಅಡಿಕ್ಷನ್ ಬಗ್ಗೆ ಎಚ್ಚರ ವಹಿಸುವಂತೆ ತಿಳಿಸಿದ ಅವರು, ಮಕ್ಕಳಲ್ಲಿ ಮೊಬೈಲ್‌ಬಳಕೆ ಹೆಚ್ಚಾಗುತ್ತಿದ್ದು,ಅದನ್ನುನಿಯಂತ್ರಿಸುವಮತ್ತುಅದರಸರಿಯಾದಬಳಕೆಯ ಕುರಿತುಜಾಗೃತಿ ಮೂಡಿಸುವಂತೆ ಮತ್ತು ಜಿಲ್ಲಾಧಿಕಾರಿಗಳ ಜೊತೆಗೆ ಈಗಾಗಲೇ ಶಾಲೆ, ಕಾಲೇಜುಗಳಲ್ಲಿ ಮೊಬೈಲ್ ಸಂಪೂರ್ಣನಿಷೇಧದ ಕುರಿತುಚರ್ಚೆಆಗಿರುವುದನ್ನು ಮತ್ತು ಮಕ್ಕಳಲ್ಲಿ ಮಾನವೀಯ ಮೌಲ್ಯಗಳು ಮತ್ತುದೇಶಪ್ರೇಮತುಂಬಲು ಹೇಳಿದರು.

ಮೊರಾರ್ಜಿ ಶಾಲೆಗಳು ಎಲ್ಲ ಸೌಕರ್ಯಗಳಿದ್ದರೂ ಉತ್ತಮ ಫಲಿತಾಂಶ ನೀಡುತ್ತಿಲ್ಲ. ಈ ಸಲ ಹೆಚ್ಚಿನ ಶ್ರಮವಹಿಸಿ ಉತ್ತಮ ಫಲಿತಾಂಶ ಸಾಧಿಸಬೇಕಾಗಿದ್ದು, ಉತ್ತಮಕಾರ್ಯ ನಿರ್ವಹಿಸಿದ ಶಿಕ್ಷಕರಿಗೆ ಗೌರವಿಸಲಾಗುವುದು ಮತ್ತು ನಿರ್ಲಕ್ಷತನ ವಹಿಸಿದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.ಒಟ್ಟಾರೆಯಾಗಿ ಕಳೆದ ವರ್ಷದ ಫಲಿತಾಂಶಕ್ಕಿಂತಉತ್ತಮ ಫಲಿತಾಂಶ ಸಾಧಿಸುವಲ್ಲಿಎಲ್ಲರೂ ಸೇರಿಕಾರ್ಯ ನಿರ್ವಹಿಸಬೇಕು ಎಂದರು. ಸಭೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಎಂ.ಸಿ.ಮನ್ನಿಕೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆಯಉಪನಿರ್ದೇಶಕ ಪುಂಡಲಿಕಕಾಂಬಳೆ, ಶಿಕ್ಷಣಾಧಿಕಾರಿ ಎಸ್.ಜಿ.ಮಿರ್ಜಿ, ಪಿಯು ಕಾಲೇಜುಗಳ ಪ್ರಾಂಶುಪಾಲರು, ಮೊರಾರ್ಜಿ ಶಾಲೆಗಳ ಮುಖ್ಯೋಪಾಧ್ಯಾಯರು, ಶಿಕ್ಷಣ ಇಲಾಖೆಯ ಬಿಇಒಗಳು ಮತ್ತು ನೋಡಲ್ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಮೋದಿ ಕಂಡರೆ ಶತ್ರು ದೇಶಗಳಿಗೆ ನಡುಕ: ಸಂಗಪ್ಪ ಗಾಣಿಗೇರ



**ಕಮತಗಿ :** ಕೆಲವು ಶತ್ರು ದೇಶಗಳಿಗೆ ಪ್ರಧಾನಿನರೇಂದ್ರಮೋದಿ ಎಂದರೆ ನಡುಕ ಶುರುವಾಗುತ್ತದೆ ಎಂದು ಪಟ್ಟಣ ಪಂಚಾಯತ್ ಸದಸ್ಯ ಸಂಗಪ್ಪ ಗಾಣಿಗೇರ ಹೇಳಿದರು. ಪಟ್ಟಣದಹೊರವಲಯದಲ್ಲಿರುವ ಗಿರಿ ಮಠದ ಪ್ರದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನ ಪ್ರಯುಕ್ತಹಮ್ಮಿಕೊಳ್ಳಲಾದಸ್ವಚ್ಚತಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪ್ರಪಂಚದಲ್ಲಿ ಎಲ್ಲಾ ದೇಶಗಳು ಅನೇಕ ಪ್ರಧಾನಿಗಳ ಆಡಳಿತ ನೋಡಿವೆ. ಆದರೆ, ಕೇವಲ ಮಾತನಾಡಿ ಮನೆಗೆ ಹೋಗುವ ನಾಯಕರಲ್ಲದೆ, ಜನರ ಹಿತವನ್ನು ಗಮನದಲ್ಲಿಟ್ಟುಕೊಂಡು ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವ ನಾಯಕತ್ವವೇ ನರೇಂದ್ರ ಮೋದಿಯವರದು. ವಿರೋಧ ಪಕ್ಷಗಳು ಎಷ್ಟೇ ವಿರೋಧ ವ್ಯಕ್ತಪಡಿಸಿದರೂ ಹಿಂದೆ ಸರಿಯದೆ ದೇಶ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಣಯ ಕೈಗೊಂಡಿದ್ದಾರೆ. ಇದೇ ಕಾರಣಕ್ಕೆ ಮೋದಿ ಅವರ ಹೆಸರು ಕೇಳಿದಾಗಲೇ ಶತ್ರು ರಾಷ್ಟ್ರಗಳಿಗೆ ನಡುಕ ಶುರುವಾಗುತ್ತದೆ ಎಂದು ಗಾಣಿಗೇರ ಹೇಳಿದರು. ಈ ಸಂದರ್ಭದಲ್ಲಿ ನೂರಾರು ಕಾರ್ಯಕರ್ತರು ಪ್ರಧಾನಿ ಮೋದಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಪರಸ್ಪರ ಸಿಹಿ ಹಂಚಿಕೊಂಡು ಸಂತೋಷ ವ್ಯಕ್ತಪಡಿಸಿದರು. ಸ್ವಚ್ಛತಾ ಕಾರ್ಯದಲ್ಲಿ ಯುವಕರೂ, ಸ್ಥಳೀಯ ಮುಖಂಡರು ಸಕ್ರಿಯವಾಗಿ ಪಾಲ್ಗೊಂಡಿದ್ದರು.

# ಬಾಳು, ಬರಹ, ಮಾತು–ಈ ಮೂವರಲ್ಲಿಯೂ ಮಾದರಿಯಾಗಿದ್ದ ಆ ಮಹಾನುಭಾವರು..!

ಮನೆಯ ಹಿರಿಯರೆಲ್ಲಾ ಸೇರಿ ಆ ಹುಡುಗನಿಗೆ #ವೆಂಕಟೇಶ ಎಂದು ಹೆಸರಿಟ್ಟರು. ಸರ್ನೇಮ್ ರೂಪದಲ್ಲಿ #ಅಯ್ಯಂಗಾರ್ ಎಂಬುದೂ ಸೇರಿಕೊಂಡಿತು. ಮುಂದೆ ಈ ಹುಡುಗ ವಿಶ್ವೇಶ್ವರಯ್ಯನವರ ಪರ್ಸನಲ್ ಸೆಕ್ರೆಟರಿಯಾಗಿಯೂ ಕೆಲಸ ಮಾಡಿದ. ಆನಂತರದಲ್ಲಿ ಐಎಎಸ್ ಅಧಿಕಾರಿಯಾದ. ಅದೇ ಸಂದರ್ಭದಲ್ಲಿ ಸಾಹಿತ್ಯ ರಚನೆಗೂ ತೊಡಗಿಕೊಂಡ. ಪರಿಣಾಮ ಕಥೆ, ಕವನ, ಕಾದಂಬರಿ, ನಾಟಕಗಳೆಲ್ಲಾ ಹೊರಬಂದವು. ಸಾಹಿತಿಗಳು ಅನ್ನಿಸಿಕೊಂಡವರೆಲ್ಲಾ ಕಾವ್ಯನಾಮ ಇಟ್ಟುಕೊಳ್ಳುತ್ತಿದ್ದ ಕಾಲ ಅದು. ಈ ಸಾಹಿತಿ ಕಮ್ ಅಧಿಕಾರಿ ಕೂಡ #ಶ್ರೀನಿವಾಸ ಎಂಬ ಪೆನ್ನೇಮ್ ಇಟ್ಟುಕೊಂಡೇ ಸಾಹಿತ್ಯ ರಚನೆಯನ್ನು ಮುಂದುವರಿಸಿದ. ಈತನ #ವೆಂಕಟೇಶಅಯ್ಯಂಗಾರ್' ಎಂಬ ಒರಿಜಿನಲ್ ಹೆಸರಿನ ಹಿಂದೆಯೇ #ಮಾಸ್ತಿ ಎಂಬ ಹುಟ್ಟೂರಿನ ಹೆಸರೂ ಸೇರಿಕೊಂಡಿತ್ತು. ಕಾಲಾನಂತರದಲ್ಲಿ 'ವೆಂಕಟೇಶ ಅಯ್ಯಂಗಾರ್' ಮತ್ತು 'ಶ್ರೀನಿವಾಸ' ಎಂಬ ಹೆಸರುಗಳನ್ನು ಜನರು ಮರೆತೇ ಬಿಡುವಷ್ಟರ ಮಟ್ಟಿಗೆ 'ಮಾಸ್ತಿ' ಎಂಬ ಹೆಸರು ಫೇಮಸ್ ಆಗಿಹೋಯಿತು. #ಮಾಸ್ತಿ ಕನ್ನಡದ ಆಸ್ತಿಯಾದದ್ದು ಹೀಗೆ!

ಶ್ರೇಷ್ಠ ಆಡಳಿತಗಾರ, ಶ್ರೇಷ್ಠ ಸಾಹಿತಿ ಮತ್ತು ಶ್ರೇಷ್ಠ ಮನುಷ್ಯ – ಇದೆಲ್ಲವೂ ಆಗಿದ್ದವರು ಮಾಸ್ತಿ ವೆಂಕಟೇಶ ಅಯ್ಯಂಗಾರ್. ಕಿರಿಯರ ಬಗ್ಗೆ ಅವರಿಗೆ ಇನ್ನಿಲ್ಲದ ಅಕ್ಕರೆಯಿತ್ತು. ಒಬ್ಬ ವ್ಯಕ್ತಿಯಾಗಿ ಮಾಸ್ತಿ ಹೇಗಿದ್ದರು ಎಂಬುದನ್ನು ತಿಳಿಯಬೇಕಾದರೆ, ನಿಸಾರ್ ಅಹಮದ್ ಅವರು ಬರೆದಿರುವ ಪ್ರಸಂಗವೊಂದನ್ನು ಓದಬೇಕು. ಅದು ಹೀಗಿದೆ:

"ನನ್ನ ವಿದ್ಯಾರ್ಥಿ ಜೀವನದಲ್ಲಿ ಗಾಂಧಿಬಜಾರಿನಲ್ಲಿ ಪ್ರತಿದಿನವೂ ಮಾಸ್ತಿಯವರ ದರ್ಶನವಾಗುತ್ತಿತ್ತು. ನಾವು ತುಂಬಾ ಚಿಕ್ಕವರಾಗಿದ್ದರೂ ಅದನ್ನು ಗಣನೆಗೆ ತೆಗೆದುಕೊಳ್ಳದೆ ಮಾಸ್ತಿಯವರು ನಮ್ಮೊಂದಿಗೆ ಮಾತಿಗೆ ನಿಲ್ಲುತ್ತಿದ್ದರು. ನಮ್ಮ ತಂದೆ ತಾಯಿಯವರ ಬಗ್ಗೆ, ನಮ್ಮ ಓದು– ಆಸಕ್ತಿಗಳ ಬಗ್ಗೆ ಪ್ರಶ್ನಿಸುತ್ತಿದ್ದರು. ಒಮ್ಮೆ ಗಾಂಧಿಬಜಾರಿನಲ್ಲಿ ಅವರೊಡನೆ ಮಾತಾಡುತ್ತಾ ನಿಂತಿದ್ದೆ. ಆಗ, ಶರ್ಟು– ಪಂಚೆ ಧರಿಸಿದ, ಕೆಲ ಹಲ್ಲುಗಳು ಉದುರಿದ, ನೆರೆತ ಕೂದಲಿನ ಸುಮಾರು 60 ವರ್ಷದ ವ್ಯಕ್ತಿಯೊಬ್ಬರು ಮಾಸ್ತಿಯವರಿಗೆ ನಮಸ್ಕರಿಸಿ, ಕಾಲಿಗೆ ಬಿದ್ದರು. ಆತ ಎದ್ದಾಗ, ಮಾಸ್ತಿ ಒಮ್ಮೆ ಆತನನ್ನು ದಿಟ್ಟಿಸಿ ನೋಡಿ, "ಅಯ್ಯಾ, ನೀನು ನಾರಾಯಣ ಭಟ್ಟನಲ್ಲವೆ? ಚಿಕ್ಕಮಗಳೂರಿನಲ್ಲಿ ನಾನು ಅಸಿಸ್ಟೆಂಟ್ ಕಮಿಷನರ್ ಆಗಿದ್ದಾಗ ನಿಮ್ಮ ತಂದೆ ಸರ್ಕೀಟ್ ಹೌಸ್ನಲ್ಲಿ ಅಡುಗೆ ಮಾಡುತ್ತಿದ್ದರು. ತುಂಬಾ ಸೊಗಸಾದ ಅಡುಗೆ. ಆಗ ನೀನು ಚೋಟುದ್ದದ ಹುಡುಗ. ನಿಮ್ಮ ತಂದೆ ತೀರಿಕೊಂಡ ವಿಷಯ 40 ವರ್ಷಗಳ ಹಿಂದೆಯೇ ತಿಳಿಯಿತು" ಎಂದದ್ದಲ್ಲದೆ ಆತನ ಪೂರ್ವೋತ್ತರಗಳನ್ನು ನಿನ್ನೆ ಮೊನ್ನೆ ತಿಳಿದವರಂತೆ ಹೇಳತೊಡಗಿದರು. ಅವರು ಹೇಳುತ್ತಿದ್ದುದೆಲ್ಲಾ 60 ವರ್ಷಗಳ ಹಿಂದಿನ ನೆನಪು! ಆ ವ್ಯಕ್ತಿ, ಜೋಡಿಸಿದ ಕೈಯನ್ನು ತೆಗೆಯದೆ, "ಸ್ವಾಮಿ, 60 ವರ್ಷ ಕಳೆದಿದ್ದರೂ ನನ್ನನ್ನು ಹೇಗೆ ಗುರುತು ಹಿಡಿದಿರಿ? ಇಷ್ಟೆಲ್ಲ ಸಂಗತಿಗಳು ಹೇಗೆ ನೆನಪಿಗೆ ಬಂದವು? ನಿಮ್ಮ ಜ್ಞಾಪಕ ಶಕ್ತಿ ಅದ್ಭುತ ಸ್ವಾಮಿ" ಎಂದು ಮೆಚ್ಚುಗೆ ವ್ಯಕ್ತಪಡಿಸಿದ. ಆಗೊಮ್ಮೆ ನಸುನಕ್ಕ ಮಾಸ್ತಿ ಅವನ ಕುಟುಂಬದ ಬಗ್ಗೆ ವಿಚಾರಿಸಿದರು. ಬಿಡುವಿದ್ದಾಗ ಒಮ್ಮೆ ಮನೆಗೆ ಬಂದು ಹೋಗಬೇಕೆಂದು ಒತ್ತಾಯಿಸಿದರು!

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಮಾತುಗಳಲ್ಲಿ ಎಷ್ಟೊಂದು ಸ್ವಾರಸ್ಯ ಇರುತ್ತಿತ್ತು, ಅವರ ಅದ್ಭುತ ನೆನಪಿನ ಶಕ್ತಿ ಎಂತೆಂಥ ಮಾಹಿತಿಗಳನ್ನು ಒದಗಿಸುತ್ತಿತ್ತು. ಆ ಹಿರಿಯಜ್ಜನ ಮಾತುಗಳಲ್ಲಿ ಅದೆಷ್ಟು ವಿನೋದ ತುಂಬಿರುತ್ತಿತ್ತು ಎಂಬುದನ್ನು ನಟ– ನಿರ್ದೇಶಕ ಸಿ. ಆರ್. ಸಿಂಹ ಹೀಗೆ ವಿವರಿಸಿದ್ದಾರೆ :

"ಅದು 1972ನೇ ಇಸವಿ. ನಾವು ಗೆಳೆಯರು ಸೇರಿಕೊಂಡು 'ನಟರಂಗ' ಎಂಬ ರಂಗತಂಡವನ್ನು ಸ್ಥಾಪಿಸಿದ್ದೆವು. ನಮ್ಮ ಪ್ರದರ್ಶನದ ಮೊದಲ ನಾಟಕ ಮಾಸ್ತಿಯವರ 'ಕಾಕನಕೋಟೆ.' ಅದರ ಪ್ರದರ್ಶನಕ್ಕೆ ಅನುಮತಿ ಕೇಳಲು ಹೋದೆ. ಪರಿಚಯ ಹೇಳಿಕೊಂಡು, ನನ್ನ ಹೆಸರು 'ಸಿಂಹ' ಎಂದೆ. ಕುಲಗೋತ್ರ ಕೇಳಿದರು. ಹೇಳಿದೆ. ಆನಂತರ 'ನಮ್ಮ ರಾಮಸ್ವಾಮಿ ಶಾಸ್ತ್ರಿಗಳ ಮಗನೇ ನೀನು? ನಿಮ್ಮ ಕುಲದೈವ ಮದ್ದೂರು ನರಸಿಂಹ. ಕುಲದ ಹಿರಿಮಗನಿಗೆ ನರಸಿಂಹ, ನರಹರಿ ಎಂದೆಲ್ಲಾ ಹೆಸರಿಡುತ್ತಾರೆ. ನಿಮ್ಮ ಮುತ್ತಾತನ ಕಾಲದಿಂದಲೂ ಹೀಗೇ ನಡೆದುಕೊಂಡು ಬಂದಿದೆ. ಆದ್ದರಿಂದ ನೀನು ಹುಲಿ, ಸಿಂಹ, ಕರಡಿ– ಇದ್ಯಾವುದೂ ಅಲ್ಲ. ನೀನು 'ನರಸಿಂಹ' ಅಂದರು. ಅಲ್ಲಿಂದಾಚೆಗೆ ಮಾಸ್ತಿಯವರು ನನ್ನನ್ನು ಕರೆದಿದ್ದು 'ನರಸಿಂಹಾ' ಅಂತಲೇ.

'ಕಾಕನಕೋಟೆ' ನಾಟಕವಾಗಿ ಪ್ರಚಂಡ ಯಶಸ್ಸು ಕಂಡಿತು. ಮುಂದೆ ಅದನ್ನು ಸಿನಿಮಾ ಆಗಿಯೂ ತಯಾರಿಸಿದೆ. ಸಿನಿಮಾ ಕೂಡ ಗೆದ್ದಿತು. ಅತ್ಯುತ್ತಮ ಚಿತ್ರ, ಅತ್ಯುತ್ತಮ ನಿರ್ದೇಶನವೆಂದು ರಾಜ್ಯ ಪ್ರಶಸ್ತಿ ಬಂತು. ಹಾಗೆಯೇ ಉತ್ತಮ ಕಥೆ ಎಂದು ಮಾಸ್ತಿ ಅವರಿಗೂ ಪ್ರಶಸ್ತಿ ಬಂತು. ಲಾಲ್ಬಾಗ್ನ ಗಾಜಿನಮನೆಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ. ಅವತ್ತು ಪ್ರಶಸ್ತಿ ಸ್ವೀಕರಿಸಲು ಬಂದಿದ್ದ ಮಾಸ್ತಿ, ನನ್ನನ್ನು ಹತ್ತಿರ ಕರೆದು ತುಂಟ ನಗೆಯೊಂದಿಗೆ ಕೇಳಿದ್ದರು: 'ಅಲ್ಲಾ ಕಣೋ ನರಸಿಂಹಾ, ನಾನು ಬರೆದಿರೋದು ನಾಟಕ, ಇವರು ನೋಡಿದ್ರೆ ಅತ್ಯುತ್ತಮ ಕಥೆ ಅಂತ ಪ್ರಶಸ್ತಿ ಕೊಡ್ತಾ ಇದಾರಲ್ಲ?! ನಾಟಕ ಹೇಗೋ ಕಥೆ ಆಗುತ್ತೆ?'

ಆಫೀಸರ್ ಆಗಿದ್ದ ದಿನಗಳಲ್ಲಿ ಮಾಸ್ತಿಯವರು ಎಷ್ಟು ಸೂಕ್ಷ್ಮವಾಗಿ ಪರಿಸ್ಥಿತಿಯನ್ನು ಗಮನಿಸುತ್ತಿದ್ದರು, ತಮ್ಮ ಕೈ ಕೆಳಗಿನ ನೌಕರರ ಮನೋಭಾವವನ್ನು ಹೇಗೆ ಗ್ರಹಿಸುತ್ತಿದ್ದರು ಎಂಬುದಕ್ಕೆ ಅವತ್ತಿನ ಸಂದರ್ಭದಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನ ಅಧ್ಯಾಪಕರಾಗಿದ್ದ ಸ.ಸ. ಮಾಳವಾಡರು ಬರೆದ ಪ್ರಸಂಗವೊಂದನ್ನು ಉಲ್ಲೇಖಿಸಬಹುದು. ಆ ವಿವರಣೆ ಹೀಗೆ:

"ಮಾಸ್ತಿಯವರು ಎ.ಸಿ. ಆಗಿದ್ದ ಸಂದರ್ಭ. ಆಗೊಮ್ಮೆ ಅವರೊಂದಿಗೆ ಕಾರ್ಯನಿಮಿತ್ತ ಮೈಸೂರಿಗೆ ಹೋಗಬೇಕಾಯಿತು. ಅಲ್ಲಿ ಕೆಲಸ ಮುಗಿಸಿ ವಾಪಸ್ ಬೆಂಗಳೂರಿಗೆ ಬರುವಾಗ ಶಿವನಸಮುದ್ರದ ಬಳಿಯಿದ್ದ ಎರಡು ದೇವಾಲಯಗಳನ್ನು ನೋಡಲು ತೆರಳಿದೆವು. ಆ ಪೈಕಿ ಒಂದು ವೈಷ್ಣವ ದೇವಾಲಯ, ಇನ್ನೊಂದು ಶೈವ ದೇವಾಲಯ. ವೈಷ್ಣವ ದೇವಾಲಯದಲ್ಲಿ ನಮಗೆ ರಾಜೋಪಚಾರ ದೊರೆಯಿತು. ಪ್ರಸಾದ ತೀರ್ಥಗಳಲ್ಲಿ ಪಚ್ಚಕರ್ಪೂರದ ಪರಿಮಳವಿತ್ತು. ಕಾಫಿಯೂ ಬಂತು. ಕೊನೆಗೆ ಸಂದರ್ಶನ. ಪುಸ್ತಕದಲ್ಲಿ ನಮ್ಮಿಬ್ಬರ ಅಭಿಪ್ರಾಯವನ್ನೂ ಬರೆಸಿಕೊಂಡರು. ಅಲ್ಲಿಂದ ಸೀದಾ ಶೈವ ದೇವಾಲಯಕ್ಕೆ ಹೋದರೆ ನಿರಾಸೆಯಾಯಿತು. ಕಾರಣ, ಅಲ್ಲಿ ನಮಗೆ ಸಾಧಾರಣ ಅನ್ನುವಂಥ ಸ್ವಾಗತ ಸಿಕ್ಕಿತು. ದೇವರ ದರ್ಶನ ಮುಗಿಸಿಕೊಂಡು ಪ್ರಯಾಣ ಮುಂದುವರಿಸಿದಾಗ ನಾನು ಸಹಜವಾಗಿಯೇ ವೈಷ್ಣವ ದೇವಾಲಯದ ಅರ್ಚಕರನ್ನು ಹೊಗಳಿದೆ. ಶೈವ ದೇವಾಲಯದ ಅರ್ಚಕರನ್ನು ತೆಗಳಿದೆ. ಆಗ ಮಾಸ್ತಿಯವರು ಹೇಳಿದರು: " ವೈಷ್ಣವ ದೇವಾಲಯದ ಅರ್ಚಕರು ತೋರಿದ ಜಾಣತನವನ್ನು ಶೈವದೇವಾಲಯದವರು ತೋರಲಿಲ್ಲ ನಿಜ. ಆದರೆ ಶೈವ ದೇವಾಲಯದವರಿಗಿದ್ದ ಸರಳತೆ ಮತ್ತು ಪ್ರಾಮಾಣಿಕತ ಅವರಿಗೆ ಇರಲಿಲ್ಲ. ಮೈಸೂರು ಸರ್ಕಾರದ ಒಬ್ಬ ಹಿರಿಯ ಅಧಿಕಾರಿ ಮತ್ತು ಧಾರವಾಡದ ಸರ್ಕಾರಿ ಕಾಲೇಜಿನ ಅಧ್ಯಾಪಕರೊಬ್ಬರು ದೇವಾಲಯಕ್ಕೆ ಬಂದಿದ್ದರು. ಅವರ ವಿಶೇಷ ಸ್ವಾಗತಕ್ಕೆ ಇಂತಿಷ್ಟು ಹಣ ಖರ್ಚಾಗಿದೆ ಎಂದು ಸುಳ್ಳು ಲೆಕ್ಕ ಬರೆದು ಒಂದಷ್ಟು ಹೆಚ್ಚಿನ ಹಣ ಪಡೆಯುವ ಜಾಣತನ ವೈಷ್ಣವ ದೇವಾಲಯದ ಆರ್ಚಕರದ್ದು. ಈ ದಿಸೆಯಲ್ಲಿ, ನಮಗೆ ಸಾಧಾರಣ ಸ್ವಾಗತ ನೀಡಿದ ಶೈವ ದೇವಾಲಯದ ಅರ್ಚಕರು ಮುಗ್ಧರು."

ಮಾಸ್ತಿ ಕನ್ನಡದ ಆಸ್ತಿ ಎಂಬ ಮಾತು ಎಂದೆಂದಿಗೂ ಸತ್ಯ ಎಂಬ ಮಾತಿಗೆ ಸಾಕ್ಷಿಯಾಗುವ ಒಂದು ಸಂದರ್ಭವನ್ನು ಹಿರಿಯರಾದ ಎಲ್. ಎಸ್. ಶೇಷಗಿರಿರಾವ್ ಹೀಗೆ ನೆನಪಿಸಿಕೊಂಡಿದ್ದಾರೆ:

# ಪರಿಸರ ಸಂರಕ್ಷಿಸಲು ತಾಯಿ ಹೆಸರಿನಲ್ಲಿ ಒಂದು ಮರ ಎಂಬ ವಿಶಿಷ್ಟ ಅಭಿಯಾನ

**ವಿಜಯಪುರ:** ಪರಿಸರ ರಕ್ಷಣೆ ಹಾಗೂ ಪರಿಸರದ ಮಹತ್ವದ ಕುರಿತು ಜಾಗೃತಿ ಮೂಡಿಸಲು ವಿಶಿಷ್ಟ ಕಾರ್ಯಕ್ರಮವೊಂದನ್ನು ಗುರುವಾರ ನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಮೇರಾ ಯುವ ಭಾರತ ವಿಜಯಪುರ ಹಾಗೂ ಸಖಿ ಯುವ ಮಹಿಳಾ ಸೇವಾ ಸಂಸ್ಥೆ ಅಡಿಯಲ್ಲಿ ತಾಯಿ ಹೆಸರಿನಲ್ಲಿ ಒಂದು ಮರ ಅಭಿಯಾನ ಎಂಬ ವಿನೂತನ ಕಾರ್ಯಕ್ರಮ ನಡೆಸಲಾಯಿತು.

ನಗರದ ರವೀಂದ್ರನಾಥ ಠಾಗೋರ್ ಶಾಲೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪರಿಸರವನ್ನು ರಕ್ಷಿಸಿ ಪೊಷಿಸುವ ಕುರಿತು ಜಾಗೃತಿ ಮೂಡಿಸಲಾಯಿತು.

ಶಾಲೆಯ ಹೆಡ್ ಮಾಸ್ಟರ್ ಶಿವರಾಮ ಜಮ್ಮನಕಟ್ಟಿ, ಪ್ರಲ್ಹಾದ ಹೂಗಾರ ಪರಿಸರವನ್ನು ಸಂರಕ್ಷಿಸಿದರೆ ಪರಿಸರ ನಮಗೆ ಏನೆಲ್ಲಾ ಕೊಡುತ್ತದೆ ಎನ್ನುವುದರ ಕುರಿತು ವಿವರಿಸಿದರು.

ಇದೇಸಂದರ್ಭದಲ್ಲಿಹಿಂದಿದಿವಸ್‌ಆಚರಿಸಲಾಯಿತು. ಈ ವೇಳೆ ಹಿಂದಿ ಉಪನ್ಯಾಸಕಿ ಪ್ರತಿಭಾ ಸಾರವಾಡ ಹಿಂದಿ ಭಾಷೆಯ ಮಹತ್ವ ಹಾಗೂ ಪರಿಸರ ಮಹತ್ವ ವಿವರಿಸಿದರು.

ಶಾಲೆಯ ಆವರಣದಲ್ಲಿ ಸಸಿಯೊಂದನ್ನು



ನೆಡಲಾಯಿತು.

ಕಾರ್ಯಕ್ರಮದಲ್ಲಿ ಶಿಕ್ಷಕಿ ಹಾಗೂ ಸಂಸ್ಥೆಯ ಪೂಜಾ ಬಾಗಿ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ದಲಿತ ಮಹಿಳೆಗೆ ಅವಹೇಳನಕಾರಿ ಹೇಳಿಕೆ ನೀಡಿದ ಶಾಸಕ ಯತ್ನಾಳ ವಿರುದ್ಧ ಪ್ರತಿಭಟನೆ

**ವಿಜಯಪುರ:** ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ (ಯತ್ನಾಳ) ಅವರು ಕೊಪ್ಪಳದಲ್ಲಿ ದಲಿತ ಮಹಿಳೆಗೆ ಅವಹೇಳನಕಾರಿ ಹೇಳಿಕೆ ನೀಡಿದ್ದನ್ನು ಖಂಡಿಸಿ ವಿಜಯಪುರ ನಗರ ಬ್ಲಾಕ್ ಕಾಂಗ್ರೆಸ್ ಪರಿಶಿಷ್ಟ ಜಾತಿ ಘಟಕ ಹಾಗೂ ಜಲನಗರ ಬ್ಲಾಕ್ ಕಾಂಗ್ರೆಸ್ ಘಟಕದ ವತಿಯಿಂದ ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಇತ್ತೀಚೆಗೆ ಕೊಪ್ಪಳದಲ್ಲಿ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ (ಯತ್ನಾಳ) ಅವರು ಸಾಮಾನ್ಯ ದಲಿತ ಮಹಿಳೆ ಕೂಡ ಚಾಮುಂಡಿಯ ಮುಡಿಗೆ ಹೂವನ್ನು ಮುಡಿಸಲು ಯೋಗ್ಯರಲ್ಲ. ಸನಾತನ ಧರ್ಮದವರು ಮಾತ್ರ ಹೂ ಮುಡಿಸಬೇಕೆಂದು ಹೇಳಿಕೆ ನೀಡಿರುವುದು ದಲಿತ ಮಹಿಳೆಯರಿಗೆ ಅವಹೇಳನ ಮಾಡಲಾಗಿದೆ. ಅವರ ವಿರುದ್ಧ ಕ್ರಮ ಜರುಗಿಸಲು ಒತ್ತಾಯಿಸಿ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಪ.ಜಾ. ಘಟಕದ ಅಧ್ಯಕ್ಷ ರಮೇಶ ಗುಬ್ಬೇವಾಡ ಅವರು, ಮುಸ್ಲಿಂ ಹೆಣ್ಣುಮಕ್ಕಳು ಅಷ್ಟೇ ಅಲ್ಲ. ದಲಿತ ಹೆಣ್ಣುಮಕ್ಕಳು ಕೂಡ ಚಾಮುಂಡೇಶ್ವರಿಗೆ ಹೂವನ್ನು ಮುಡಿಸಲು ಯೋಗ್ಯರಲ್ಲ ಎನ್ನುವುದರ ಮೂಲಕ ಯತ್ನಾಳ ದಲಿತ ಮಹಿಳೆಯರನ್ನುಅವಮಾನಿಸಿದ್ದಾರೆ.ಅಲ್ಲದೆ



ಹಲವಾರು ಕಾರ್ಯಕ್ರಮಗಳಲ್ಲಿ ಅವರು ಮಾತನಾಡುವಾಗ ಹಿಂದುಗಳು ನಾವೆಲ್ಲರೂ ಒಂದು, ದಲಿತರು ಮತ್ತು ಹಿಂದುಳಿದವರು ಎಲ್ಲ ಜಾತಿ ಸಮುದಾಯದವರನ್ನು ಒಂದು ಎಂದು ಹೇಳುವ ತಾವು ದಲಿತರನ್ನು ಅವಮಾನಿಸಿ ಮಾತನಾಡಿರುವದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

ದಲಿತರು ಕೂಡ ಹಿಂದುಗಳೇ ಎನ್ನುವದು ತಮ್ಮ ನೆನಪಿನಲ್ಲಿರಲಿ. ಇವತ್ತು ಸಿದ್ದರಾಮಯ್ಯನವರು ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಉದ್ಘಾಟಿಸಲು ಮುಸ್ಲಿಂ ಮಹಿಳೆ ಸಾಹಿತಿ ಬಾನು ಮುಸ್ತಾಕ ಅವರಿಗೆ ಅವಕಾಶ ನೀಡಿದ್ದನ್ನು ಸ್ವಾಗತಿಸುತ್ತೇವೆ.

ಮುಂದಿನ ದಿನಮಾನಗಳಲ್ಲಿ ದಲಿತರಿಗೂ ಕೂಡ ನಾಡಹಬ್ಬ ಮೈಸೂರು ದಸರಾ ಉತ್ಸವ ಉದ್ಘಾಟಿಸಲು ಅವಕಾಶ ದೊರೆಯುತ್ತದೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಸದಸ್ಯೆ ಆರತಿ ಶಹಾಪೂರ ಮಾತನಾಡಿ, ಎಲ್ಲ ಹೆಣ್ಣುಮಕ್ಕಳಿಗೆ ಸಮಾನವಾದ ಹಕ್ಕನ್ನು ನೀಡಿರುವ ಬಾಬಾಸಾಹೇಬ ಅಂಬೇಡ್ಕರ ಅವರ ಸಂವಿಧಾನವನ್ನು ಧಿಕ್ಕರಿಸಿ ಯತ್ನಾಳರು ಮಾತನಾಡಿದ್ದಾರೆ. ಅವರ ಮಾತುಗಳು ಹೆಣ್ಣು ಕುಲಕ್ಕೆ ಮಾಡಿರುವ ಅವಮಾನ ಎಂದು ಹೇಳಿದರು.

ನಗರ ಬ್ಲಾಕ್ ಕಾಂಗ್ರೆಸ್ ಪ.ಜಾ. ಘಟಕದ ಅಧ್ಯಕ್ಷ ಪರಶುರಾಮ ಹೊಸಮನಿ ಮಾತನಾಡಿ, ನಗರ ಶಾಸಕ ಬಸನಗೌಡ ಪಾಟೀಲ (ಯತ್ನಾಳ) ಅವರು ಮೈಸೂರು ದಸರಾ ಉತ್ಸವದಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಗೆ ಸನಾತನ ಧರ್ಮದವರು ಮಾತ್ರ ಹೂ

ಮುಡಿಸಬೇಕು ಮತ್ತು ಪೂಜೆ ಸಲ್ಲಿಸಬೇಕು ಅಂತಾ ದಲಿತ ವಿರೋಧಿ ಹೇಳಿಕೆ ನೀಡಿ ದಲಿತ ಮಹಿಳೆಯರಿಗೆ ಅವಮಾನಿಸಿದ್ದಾರೆ. ಇವರು ಜಾತಿ ವಿರೋಧಿ ಚಟುವಟಿಕೆ ಮತ್ತು ಜಾತಿ ಜಾತಿಗಳ ನಡುವೆ ಕೋಮು ಗಲಭೆಗೆ ಕುಮ್ಮಕ್ಕು ನೀಡುತ್ತಿದ್ದು, ಇವರ ಮೇಲೆ ಸರಕಾರವು ಸೂಕ್ತ ಕಾನೂನು ಕ್ರಮ ಕೈಕೊಳ್ಳಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಲನಗರ ಬ್ಲಾಕ್ ಪ.ಜಾ. ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ ಛಲವಾದಿ, ಭಾರತಿ ಹೊಸಮನಿ, ತಿಪ್ಪಣ್ಣ (ವಕೀಲರು) ಮುಂತಾದವರು ಮಾತನಾಡಿದರು.

ಪ್ರತಿಭಟನೆಯಲ್ಲಿ ಡಿ.ಸಿ.ಸಿ. ಉಪಾಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ, ಡಿ.ಸಿ.ಸಿ. ಪ್ರಧಾನ ಕಾರ್ಯದರ್ಶಿಗಳಾದ ವಸಂತ ಹೊನಮೊಡೆ, ಚನಬಸಪ್ಪ ನಂದರಗಿ, ಹಾಜಿಲಾಲ ದಳವಾಯಿ, ಸತೀಶ ಅಡವಿ, ಸರ್ಫರಾಜ ಮಿರ್ದೆ, ಯುವರಾಜ ಬಜಂತ್ರಿ, ಕೃಷ್ಣಾ ಲಮಾಣಿ, ಫಯಾಜ್ ಕಲಾದಗಿ, ಅಕ್ರಂ ಮಾಶಾಳಕರ, ಅಪ್ಪು ಪೂಜಾರಿ, ವೀರೇಶ ಕಲಾಲ, ಸಂತೋಷ ಶಹಾಪುರ, ಅಶ್ಫಾಕ ಮನಗೂಳಿ, ಮಹಾದೇವ ರಾವಜಿ, ಮಹಾದೇವ ಚಲವಾದಿ, ಶಬ್ಬೀರ ಪಾಟೀಲ, ತಾಜೋದ್ದೀನ ಖಲೀಫಾ, ಬಾಬು ಯಾಳವಾರ, ಅರುಣ ಬಜಂತ್ರಿ, ಕಲ್ಲಪ್ಪ ಕಲಶೆಟ್ಟಿ, ಗೌಸ ಮುಜಾವರ, ಮಹಾದೇವ ಲಿಂಗದಳ್ಳಿ, ಮಲ್ಲಿಕಾರ್ಜುನ ಸಿಂಗೆ, ಲಾಲಸಾಬ ಕೊರಬು, ಹಮೀದಾ ಪಟೇಲ, ಅಮಿನ ಸತ್ತಿಕರ, ದಸ್ತಗೀರ ಶಾನವಾಲೆ, ರಮೇಶ ಮುದಕಣ್ಣವರ, ಇಜಾಜ್ ಮುಕಬಿಲ್, ಸಂಜೀವ ಶಿವಪೂಜಿ, ಶಿವಕುಮಾರ ಪಿ. ವಗ್ಯಾನವರ, ಸಾಗರ ಎಂ. ಹದಗಲ್, ಸತೀಶ ಪಾಟೀಲ, ಸಂಜು ಗುನ್ನಾಪೂರ, ರಾಜು ಭೂತನಾಳ, ರಾಕೇಶ ಗುನ್ನಾಪೂರ ಮುಂತಾದವರು ಭಾಗವಹಿಸಿದ್ದರು.

# ಸ್ವಚ್ಛತೆ ನಮ್ಮ ನಿತ್ಯದ ಜೀವನಶೈಲಿ ಆಗಲಿ: ಸಂತೋಷ ಬಂಡೆ



**ಇಂಡಿ:** ಸ್ವಚ್ಛತೆಯಿರುವ ಕುಟುಂಬ ಸುಖಿ ಕುಟುಂಬ ಎಂಬ ಪ್ರತೀತಿಯಿದೆ. ಸ್ವಚ್ಛತೆ ಕೇವಲ ಅಭ್ಯಾಸವಲ್ಲ. ಅದು ಜೀವನಶೈಲಿ ಆಗಬೇಕು. ಮನೆ, ಶಾಲೆ, ಸಾರ್ವಜನಿಕ ಸ್ಥಳದ ಸ್ವಚ್ಛತೆಗೆ ಮೊದಲ ಆದ್ಯತೆ ನೀಡುವ ಅಭ್ಯಾಸ ಪ್ರತಿಯೊಬ್ಬರು ರೂಢಿಸಿಕೊಳ್ಳಬೇಕು ಅಂದಾಗ ಆರೋಗ್ಯದಾಯಕ ವಾತಾವರಣ ನಮ್ಮದಾಗಲಿದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ತಾಲೂಕಿನ ಹಿರೇರೂಗಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಸ್ವಚ್ಛ ಭಾರತ ಅಭಿಯಾನದ 11ನೇ ವಾರ್ಷಿಕೋತ್ಸವ ನಿಮಿತ್ತ ಹಮ್ಮಿಕೊಂಡ "ಸ್ವಚ್ಛತೆಯೇ ಸೇವೆ 2025: ಸ್ವಚ್ಛೋತ್ಸವ"ಅಭಿಯಾನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸ್ವಚ್ಛತೆಯು ನಮ್ಮ ಆರೋಗ್ಯ, ಯೋಗಕ್ಷೇಮ ಮತ್ತು ನಮ್ಮ ಸುತ್ತಲಿನ ಪರಿಸರದ ಮೇಲೆ ಪರಿಣಾಮ ಬೀರುವ ಅತ್ಯಗತ್ಯ ಅಭ್ಯಾಸವಾಗಿದೆ. ಉತ್ತಮ ಪರಿಸರ ಮತ್ತು ಸಮಾಜಕ್ಕಾಗಿ ಸ್ವಚ್ಛತೆಗೆ ನಾವು ಮೊದಲ ಆದ್ಯತೆ ನೀಡೋಣ ಎಂದು ಹೇಳಿದರು.

ಪರಶುರಾಮ ಹೊಸಮನಿ ಮಾತನಾಡಿ, ಸ್ವಚ್ಛತೆಯು ನಿಜವಾಗಿಯೂ ಆರೋಗ್ಯಕರ ಜೀವನ ಮತ್ತು ಜವಾಬ್ದಾರಿಯುತ ಸಮಾಜದ ಅಡಿಪಾಯವಾಗಿದೆ. ಸ್ವಚ್ಛತೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಮುಖ್ಯ ಶಿಕ್ಷಕ ಅನಿಲ ಪತಂಗಿ ಮಾತನಾಡಿ, ಸ್ವಚ್ಛತೆ ಉತ್ತಮ ಆರೋಗ್ಯಕ್ಕೆ ರಹದಾರಿ, ಕೈಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು, ಬಾತ್ ರೂಮ್ ಬಳಸಿದ ನಂತರ ಕೈ ತೊಳೆಯುವಂತಹ ಸಣ್ಣ ಕ್ರಮಗಳು ಸ್ವಚ್ಛತೆಗೆ ಪೂರಕವಾಗಿವೆ ಎಂದು ಹೇಳಿದರು.

ಗ್ರಾಮದ ಸುದರ್ಶನ ಬೇನೂರ, ಉಮೇಶ ಹಲಸಂಗಿ, ಬಸವರಾಜ ತಳಕೇರಿ, ವ್ಹಿ ವೈ ಪತ್ತಾರ, ಎಸ್ ಎಂ ಪಂಚಮುಖಿ, ಮಲ್ಲಮ್ಮ ಚವ್ಹಾಣ, ಶರಣು ನಾಟಿಕಾರ, ಸಚೀನ ಹೊಸೂರ, ನಿಂಗಪ್ಪ ಡಂಗಿ ಸೇರಿದಂತೆ ಅನೇಕ ಗ್ರಾಮಸ್ಥರು ಭಾಗವಹಿಸಿದ್ದರು.

# ದೇಗಿನಾಳ ಗ್ರಾಮದಲ್ಲಿ ಸ್ವಸ್ತ ನಾರಿ, ಸಶಕ್ತ ಪರಿವಾರ ಅಭಿಯಾನ

**ವಿಜಯಪುರ:** ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರ, ಮತ್ತು ಬಿ.ಎಲ್.ಡಿ.ಇ ಆಸ್ಪತ್ರೆಯ ವೈದ್ಯಕೀಯ ವಿಭಾಗದ ಉಕ್ಕಲಿ ಗ್ರಾಮೀಣ ಆರೋಗ್ಯ ತರಬೇತಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ದೇಗಿನಾಳ ಗ್ರಾಮದಲ್ಲಿ ಸ್ವಸ್ತ ನಾರಿ, ಸಶಕ್ತ ಪರಿವಾರ ಅಭಿಯಾನ ನಡೆಯಿತು.

ಈ ಅಭಿಯಾನದ ಅಂಗವಾಗಿ ಬುಧವಾರ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಮಸಬಿನಾಳ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಶರಣು ಪಡಸಲಗಿ ಉದ್ಘಾಟಿಸಿದರು.




ಆಸ್ಪತ್ರೆಯ ಸಹಾಯಕ ವೈದ್ಯಕೀಯ ಅಧೀಕ್ಷಕ ಡಾ. ರವಿಕುಮಾರ ಬಿರಾದಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯೆ ಡಾ. ತೇಜಸ್ವಿನಿ ವಲ್ಲಬ, ಸಮುದಾಯ ವೈದ್ಯಕೀಯ ವಿಭಾಗದ ಮುಖ್ಯಸ್ಥೆ ಡಾ. ರೇಖಾ ಉದಿಗಿರಿ, ಉನ್ನತ ಭಾರತ ಅಭಿಯಾನ ಸಂಯೋಜಕ ಡಾ. ಪ್ರವೀಣ ಗಂಗನಳ್ಳಿ, ಅಂಜುಮನ್ ಕಮಿಟಿ ಅಧ್ಯಕ್ಷ ಮೌಲಾಸಾಬ್ ದಖನಿ, ಗ್ರಾ. ಪಂ. ಸದಸ್ಯರಾದ ದ್ಯಾವುಗೌಡ ಪಾಟೀಲ, ಮುಖಂಡ ಸಂಜೀವ ಖಾನಗೌಡ್ರ ಮುಂತಾದವರು ಉಪಸ್ಥಿತರಿದ್ದರು.

ಈ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ವೈದ್ಯಕೀಯ ವಿಭಾಗ,
ಮಹಿಳೆಯರ ವಿಭಾಗ,
ಚಿಕ್ಕ ಮಕ್ಕಳ ವಿಭಾಗ, ದಂತ ವಿಭಾಗ, ಚರ್ಮ ವಿಭಾಗ, ಎಲುಬು ಮತ್ತು ಕೀಲು ವಿಭಾಗ, ವೈದ್ಯರು ಉಪಸ್ಥಿತರಿದ್ದ ರೋಗಿಗಳ ಆರೋಗ್ಯ ತಪಾಸಣೆ ನಡೆಸಿ ಉಚಿತವಾಗಿ ಔಷಧಿ ವಿತರಿಸಿದರು.

# ಸಿಂದಗಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಒಂದೇ ದಿನ ನಾಲ್ಕು ಬಾರಿ ಭೂಕಂಪನ: ಜನರಲ್ಲಿ ಆತಂಕ




**ವಿಜಯಪುರ:** ಜಿಲ್ಲೆಯ ಸಿಂದಗಿ ಪಟ್ಟಣದಲ್ಲಿ ಜನರಿಗೆ ಒಂದೇ ದಿನ ನಾಲ್ಕು ಬಾರಿ ಭೂಕಂಪನ ಸಂಭವಿಸಿದ ಅನುಭವವಾಗಿದ್ದು, ಜನರಲ್ಲಿ ಆತಂಕ ಮನೆ ಮಾಡಿದೆ.

ಜಿಲ್ಲೆಯ ಸಿಂದಗಿ ಪಟ್ಟಣದ ಸುತ್ತಮುತ್ತ ಒಂದೇ ದಿನ ನಾಲ್ಕು ಬಾರಿ ಭೂಮಿ ಕಂಪನದ ಅನುಭವವಾಗಿದೆ ಎಂದು ಜನರು ತಿಳಿಸಿದ್ದಾರೆ.

ನಿನ್ನೆ ಮಧ್ಯಾಹ್ನ 3 ಗಂಟೆ, ರಾತ್ರಿ 10 ಗಂಟೆ 11ನಿಮಿಷ, ಮತ್ತೆ ರಾತ್ರಿ 10.25, ಮತ್ತೊಮ್ಮೆ 10.47 ಒಟ್ಟು 4 ಬಾರಿ ಭೂಮಿ ಕಂಪನಿಸಿದ ಅನುಭವವಾಗಿದೆ ಎಂದು ಜನರು ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ಜೋರಾದ ಶಬ್ಧದೊಂದಿಗೆ ಭೂಮಿ ಕಂಪಿಸಿದ ಅನುಭವವಾಗಿದೆ ಎಂದು ಗಾಬರಿಯಿಂದ ಜನ ಮನೆಯಿಂದ ಹೊರಗಡೆ ಬಂದಿದ್ದಾರೆ ಎಂದು ಪ್ರತ್ಯಕ್ಷ ದರ್ಶಿಗಳು ತಿಳಿಸಿದ್ದಾರೆ.

ಕಳೆದ 2 ವರ್ಷಗಳ ಹಿಂದೆ ಜಿಲ್ಲೆಯಲ್ಲಿ ಒಂದಿಲ್ಲ ಒಂದು ಕಡೆ ಸರಣಿ ಭೂಕಂಪನದ ಅನುಭವವನ್ನು ಜನರು ಅನುಭವಿಸಿದ್ದರು.

ಆದರೆ ನಿನ್ನೆ ಸಿಂದಗಿ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ನಾಲ್ಕು ಬಾರಿ ಭೂಕಂಪನ ಸಂಭವಿಸಿ ಜನರಲ್ಲಿ ಆತಂಕ ಸೃಷ್ಟಿಸಿದೆ. ರಿಕ್ಟರ್ ಮಾಪಕದಲ್ಲಿ ಎಷ್ಟು ಪ್ರಮಾಣದಲ್ಲಿ ಭೂಮಿ ಕಂಪಿಸಿದೆ ಎಂಬುದರ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಸಂಬಂಧಿಸಿದ ಇಲಾಖೆ ಈ ಬಗ್ಗೆ ನಿಖರವಾಗಿ ತಿಳಿಸಬೇಕಿದೆ.

ಸಿಂದಗಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ನಿನ್ನೆ ಪದೇ ಪದೇ ಭೂಕಂಪನ ಸಂಭವಿಸಿದ್ದಕ್ಕೆ ಕಾರಣವೇನು , ಜನರಿಗೆ ಸುರಕ್ಷತೆ ಬಗ್ಗೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕೆಂಬುದರ ಬಗ್ಗೆ ಜಿಲ್ಲಾ ಆಡಳಿತ ಚಿಂತನೆ ನಡೆಸಬೇಕಿದೆ.

# ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಅಗ್ರಹಿಸಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹ



**ವಿಜಯಪುರ:** ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಆಗ್ರಹಿಸಿ ನಗರದ ಅಂಬೇಡ್ಕರ್ ವೃತ್ತದಲ್ಲಿ ಹೋರಾಟ ಸಮಿತಿ ನೇತೃತ್ವದಲ್ಲಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಯಿತು.

ಧರಣಿ ಸತ್ಯಾಗ್ರಹ ಉದ್ದೇಶಿಸಿ ಹೋರಾಟ ಸಮಿತಿ ಸದಸ್ಯ ಅರವಿಂದ ಕುಲಕರ್ಣಿ ಮಾತನಾಡಿ, ಸರಕಾರಿ ಆಸ್ಪತ್ರೆಗೆ ಸೂಕ್ತವಾದ ಸುಮಾರು 149 ಎಕರೆಗೂ ಹೆಚ್ಚು ಸ್ಥಳಾವಕಾಶ ಸರಕಾರಿ ಆಸ್ಪತ್ರೆಯ ಆವರಣದಲ್ಲಿದೆ. ತಾಯಿ ಮತ್ತು ಮಕ್ಕಳ ವಿಶೇಷ ಆಸ್ಪತ್ರೆಯೂ ಇದೆ. ರಾಜ್ಯದ ಯಾವ ಜಿಲ್ಲೆಯಲ್ಲಿಯೂ ಇಲ್ಲ. ಸರ್ಕಾರ ಇದನ್ನು ಗುರುತಿಸಿ ಪೂರ್ಣ ಪ್ರಮಾಣದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ಸ್ಥಾಪಿಸಬೇಕು. ಪಿಪಿಪಿ ಮಾದರಿಯನ್ನು ಯಾವ ಕಾರಣಕ್ಕೂ ವಿಜಯಪುರದಲ್ಲಿ ತರಲು ಬಿಡುವುದಿಲ್ಲ. ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಇನ್ನೋರ್ವ ಮುಖಂಡ ಅಣ್ಣರಾಯ ಈಳಗೇರ ಮಾತನಾಡಿ, ಒಂದು ವೇಳೆ ಖಾಸಗಿ ಸಹಭಾಗಿತ್ವದಲ್ಲಿ ಕಾಲೇಜು ಆರಂಭವಾದರೆ ಅಲ್ಲಿ ಬಡ ಮತ್ತು ಮಧ್ಯಮ ವರ್ಗದ ಹಾಗು ಜನಸಾಮಾನ್ಯರ ಮಕ್ಕಳು ಕಲಿಯಲು ಸಾಧ್ಯವಾಗುವುದಿಲ್ಲ. ಮತ್ತು ಇದು ಮುಂದೆ ಕ್ರಮೇಣ ಸಂಪೂರ್ಣ ಖಾಸಗೀಕರಣಗೊಂಡು ಬಡವರ ಶಿಕ್ಷಣದ ಹಕ್ಕನ್ನು ಕಿತ್ತುಕೊಳ್ಳುತ್ತದೆಣಟಿಜಜಜಿಟಿಜಜ. ನಾವೆಲ್ಲರೂ ಮುಂದಿನ ದಿನಗಳಲ್ಲಿ ಬೃಹತ್ ಹೋರಾಟಕ್ಕೆ ಸಜ್ಜಾಗಬೇಕಾಗುತ್ತದೆ ಎಂದು ಹೇಳಿದರು.

ಜಗದೀಶ ಸೂರ್ಯವಂಶಿ ಮಾತನಾಡಿ, ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಆರಂಭಿಸಲು 150 ಕ್ಕೂ ಅಧಿಕ ಎಕರೆ ಜಾಗವಿರುವ ಏಕೈಕ ಜಿಲ್ಲೆ ಇದಾಗಿದ್ದು, ವಿದ್ಯಾರ್ಥಿ ಯುವಕರು ಇದರ ವಿರುದ್ಧ ಗಟ್ಟಿ ಧ್ವನಿಯಾಗಬೇಕು. ಒಂದು ವೇಳೆ ಖಾಸಗಿಯವರಿಗೆ ಅವಕಾಶ ಕೊಟ್ಟರೆ ಜಿಲ್ಲಾ ಬಂದ್ ಗೆ ಕರೆ ಕೊಡಬೇಕಾಗುತ್ತದೆ ಎಂದರು.

ಸುರೇಶ ಬಿಜಾಪುರ ಮಾತನಾಡಿ, ವಿಜಯಪುರ ಜಿಲ್ಲೆಯ ಜನರು ಉದ್ದೇಶಿತ ಖಾಸಗಿ ಸಹಭಾಗಿತ್ವದಡಿ ಸರಕಾರಿ ವೈದ್ಯಕೀಯ ಕಾಲೇಜು ಆರಂಭಿಸುವುದನ್ನು ತೀವ್ರವಾಗಿ ವಿರೋಧಿಸಿ ಹೋರಾಟವನ್ನು ಮಾಡುತ್ತಿದ್ದಾರೆ. ಇಡೀ ಜಿಲ್ಲೆಯಲ್ಲಿ ಎಲ್ಲ ಸಂಘ ಸಂಸ್ಥೆಗಳು ತೀವ್ರ ಪ್ರತಿರೋಧವನ್ನು ತೋರಿಸಿದ್ದಾರೆ. ಕೆಲವು ಜನಪ್ರತಿನಿಧಿಗಳು ಈ ಪಿಪಿಪಿ (ಪಬ್ಲಿಕ್ ಪ್ರೈವೇಟ್ ಪಾರ್ಟನರ್ಶಿಪ್) ಮಾದರಿಯನ್ನೂ ವಿರೋಧಿಸಿದ್ದಾರೆ. ಹೀಗಿರುವಾಗ ರಾಜ್ಯ ಸರಕಾರ ಹಠಾತ್ ಆಗಿ ಪಿಪಿಪಿ ಯೋಜನೆ ಅನುಷ್ಠಾನಗೊಳಿಸಲು ನೊಡಲ್ ಅಧಿಕಾರಿ ನೇಮಕಮಾಡಿರುವುದು ಏಕಪಕ್ಷೀಯ ಮತ್ತು ಅಪ್ರಜಾತಾಂತ್ರಿಕ ಕ್ರಮವಾಗಿದ್ದು, ಕೂಡಲೇ ಸರಕಾರ ಈ ಕ್ರಮವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ನ್ಯಾಯವಾದಿ ವಿದ್ಯಾವತಿ ಅಂಕಲಗಿ ಅವರು ಮಾತನಾಡಿ, ಜಿಲ್ಲೆಯ ಜನತೆ ಯಾವುದೇ ಕಾರಣಕ್ಕೂ ಪಿಪಿಪಿ ಮಾದರಿಯನ್ನು ಅಳವಡಿಸಲು ಬಿಡಬಾರದು. ಇದರ ವಿರುದ್ಧ ಹೋರಾಟಕ್ಕೆ ಜಿಲ್ಲೆಯ ಜನತೆ ಅಣಿಯಾಗಬೇಕೆಂದು ಹೋರಾಟ ಸಮಿತಿಯು ಕರೆ ನೀಡುತ್ತದೆ.

ಶ್ರೀನಾಥ ಪೂಜಾರಿ, ಸರಕಾರ ಖಾಸಗಿ ವ್ಯಕ್ತಿಗಳ ಮುಂದೆ ಮಂಡಿಯೂರುತ್ತಿರುವುದು ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಮಾನವಾಗಿದೆ. ಸರಕಾರಿ ವೈದ್ಯಕೀಯ ಕಾಲೇಜು ಜಿಲ್ಲೆಯ ಜನರ ಹಲವಾರು ವರ್ಷಗಳ ಬೇಡಿಕೆಯಾಗಿ ಉಳಿದಿಲ್ಲ. ಬದಲಾಗಿ ಅದು ಈಗ ಜಿಲ್ಲೆಯ ಜನರ ಭಾವನೆಯಾಗಿ ಪರಿವರ್ತನೆಗೊಂಡಿದೆ. ಇದನ್ನು ಈಡೇರಿಸುವಂತೆ ಮುಖ್ಯಮಂತ್ರಿಗಳಿಗೆ ಅಲ್ಲೇ ಇದ್ದ ಜಿಲ್ಲೆಯ ಜನಪ್ರತಿನಿಧಿಗಳು ಸಚಿವರು ಮನವಿ ಮಾಡಬೇಕಿತ್ತು, ಒತ್ತಡ ಹೇರಬೇಕಿತ್ತು. ಆದರೆ ಇವರುಗಳು ಅಸಹಾಯಕರಂತೆ ನಿಂತಿದ್ದು ದೊಡ್ಡ ದುರಂತವಾಗಿದೆ ಎಂದು ಹೇಳಿದರು.

ಒಂದು ವೇಳೆ ಸರ್ಕಾರ ಖಾಸಗಿ ಸಹಭಾಗಿತ್ವವನ್ನು ಹಿಂದೆತೆಗೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಪವಾಸ ಸತ್ಯಾಗ್ರಹ ಮಾಡಲಾಗುತ್ತದೆ ಎಂದು ಹೇಳಿದರು.

ಈ ಪ್ರತಿಭಟನೆಯಲ್ಲಿ, ಅನಿಲ ಹೊಸಮನಿ, ಅಕ್ರಮ ಮಾಶಾಳಕರ, ಮಲ್ಲಿಕಾರ್ಜುನ ಕೆಂಗನಾಳ, ಲಲಿತಾ ಬಿಜ್ಜರಗಿ, ಜಗದೇವ ಸೂರ್ಯವಂಶಿ, ಶ್ರೀನಾಥ ಪೂಜಾರಿ, ದಸ್ತಗೀರ ಉಕ್ಕಲಿ, ಗೀತಾ ಹೆಚ್, ಮಹದೇವಿ ಧರ್ಮಶೆಟ್ಟಿ, ಮಲ್ಲಿಕಾರ್ಜುನ ಬಟಗಿ, ಬಾಬುರಾವ ಬೀರಕಬ್ಬಿ, ಸಿದ್ರಾಮ ಹಿರೇಮಠ, ಪ್ರಭುಗೌಡ ಪಾಟೀಲ, ಅಬ್ದುಲ್ ರೆಹಮಾನ್ ನಾಸಿರ, ಸುರೇಶ ಬಿಜಾಪುರ, ಸಿದ್ದನಗೌಡ ಪಾಟೀಲ, ಲಕ್ಷ್ಮಣ ಕಂಬಾಗಿ, ರೆಹಮಾನ್, ನೀಲಾಂಬಿಕ ಬಿರಾದಾರ, ಬಸೀರ ಅಹ್ಮದ್ ತಾಂಬೆ, ಲಕ್ಷ್ಮಣ ಹಂದ್ರಾಳ, ಸಂಜೀವ ಕಂಬಾಗಿ, ಮಲ್ಲಿಕಾರ್ಜುನ ಹೆಚ್. ಟಿ, ವೆಂಕಟೇಶ ವಗ್ಗನ್ನವರ, ಎನ್. ಎಮ್. ಹರನಾಳ, ರೇಣುಕಾ ಕೋಟ್ಯಾಳ, ಸಿಸ್ಟರ್ ಸಿಂಥಿಯಾ ಪೆರಾರಿ, ಕಾಮಿನಿ ಕಸಬೆ, ಶೋಭಾ ವಾಲಿಕಾರ, ಶ್ರೀಧರ ಕೊಣ್ಣೂರ, ಗೀತಾ ಕಟ್ಟಿ, ರವಿ ಕಟ್ಟಿಮನಿ, ಜಯಶ್ರೀ ಚಲವಾದಿ, ಸುನೀತಾ ಮೋರೆ, ಚಂದು ಜಾಧವ, ಸರೋಜಾ ಕಟ್ಟಿಮನಿ, ಶಾಂತಾ ಹೊಸಮನಿ, ಹಮೀದಾ ಪಟೇಲ ಮುಂತಾದವರು ಭಾಗವಹಿಸಿದ್ದರು.

# ಫುಟ್‌ಬಾಲ್ : ಸತತವಾಗಿ 3ನೇ ಬಾರಿಗೆ ರಾಜ್ಯ ಮಟ್ಟಕ್ಕೆ ಆಯ್ಕೆ



**ಜಮಖಂಡಿ:** ಪದವಿಪೂರ್ವ ಕಾಲೇಜು ಶಿಕ್ಷಣ ಇಲಾಖೆಯ ವತಿಯಿಂದ ದಿ.17:09:2025 ರಂದು ಮುಧೋಳ ನಗರದಲ್ಲಿ ಜರುಗಿದ ಜಿಲ್ಲಾ ಮಟ್ಟದ ಫುಟ್‌ಬಾಲ್ ಪಂದ್ಯಾಟದಲ್ಲಿ ಜಮಖಂಡಿ ಬಾಲಕರ ಸರಕಾರಿಪದವಿಪೂರ್ವಕಾಲೇಜಿನಬಾಲಕರತಂಡವು ಗೆಲವು ಸಾದಿಸಿ ಸತತವಾಗಿ ಮೂರನೇ ಬಾರಿಗೆ ರಾಜ್ಯ ಮಟ್ಟಕ್ಕೆ ಆಯ್ಕೆ ಯಾಗಿದೆ ಎಂದು ಕಾಲೇಜಿನ ಕ್ರೀಡಾ ವ್ಯವಸ್ಥಾಪಕ ಅಶೋಕ ರಾಮದುರ್ಗ ತಿಳಿಸಿದರು.

ಹಳೆ ವಿದ್ಯಾರ್ಥಿ ಸಂಘದ ಅದ್ಯಕ್ಷ ಪ್ರದೀಪ ಮೆಟಗುಡ್ಡ ಮಾತನಾಡಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಮುಧೋಳ ನಗರದಲ್ಲಿ ಜರುಗಿದ ಜಿಲ್ಲಾ ಮಟ್ಟದ ಪುಟಬಾಲ ಪದ್ಯಾವಳಿಯಲ್ಲಿ ಭಾಗಿಯಾಗಿ ವಿಜಯಶಾಲಿಯಾಗಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದು ತುಂಬ ಕುಸಿ ವಿಷಯ ಅವರಿಗೆ ಅಭಿನಂದಿಸಿ ಶುಭ ಹಾರೈಸಿದರು.

ಪ್ರಾಚಾರ್ಯರ ಎಸ್.ಎಸ್.ಬಿರಾದಾರ, ತರಬೇತಿದಾರ ಕರಿಯಪ್ಪ ಪೂಜಾರಿ, ಪರಶುರಾಮ ಜಿಟ್ಟಿ, ರಾಕೇಶ ಗುರವ ಇನ್ನಿತರರು ಇದ್ದರು

# ಅಂಬೇಡ್ಕರ್ ಸರ್ಕಲ್ ದಿಂದ ಶಿವಾಜಿ ಸರ್ಕಲ್ ವರೆಗೆ ರಸ್ತೆ ನಿರ್ಮಿಸಲು ಸಾರ್ವಜನಿಕರ ಆಗ್ರಹ



**ಕೊಲ್ಹಾರ:** ಪಟ್ಟಣದ ಅಂಬೇಡ್ಕರ್ ಸರ್ಕಲ್ ದಿಂದ ಶಿವಾಜಿ ಸರ್ಕಲ್ ವರೆಗಿನ 18ಮೀ ಮುಖ್ಯ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟು ಅದು ಈಗ ಕೆಸರು ಗದ್ದೆಯಂತಾಗಿದೆ. ಸಧ್ಯ ಈ ರಸ್ತೆಯ ಮೂಲಕ ಸಾರ್ವಜನಿಕರಿಗೆ ಸಂಚರಿಸಲು ಬಹಳಷ್ಟು ತೊಂದರೆಯಾಗಿದೆ. ಹಾಗೆಯೇ ಇದೆ ರಸ್ತೆ ಯಲ್ಲಿ ಜಿಯೋ ಕೇಬಲನ್ನು ಅಳವಡಿಸಲು ರಸ್ತೆ ಅಗೆಯುತ್ತಿದ್ದು ಇದರಿಂದ ಕೆಳಗಿರುವ ಕಪ್ಪು ಮಣ್ಣು ಮೇಲೆ ಬಂದು ಬರಿಗಾಲೀಲೆ ತಿರಗಾಡಲು ಕೂಡಾ ಬಾರದೆ ಇರುವ ಪರಿಸ್ಥಿತಿ ನಿರ್ಮಾಣ ವಾಗಿದೆ ಇದರಿಂದ ಜನ ರೊಚ್ಚಿಗೆದ್ದು ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ವಾರ್ಡಿನ ಸದಸ್ಯರು ಕೂಡಲೇ ಸುಸಜ್ಜಿತವಾದ ರಸ್ತೆಯನ್ನು ನಿರ್ಮಿಸಬೇಕೆಂದು ಸಾಬು ಭಜಂತ್ರಿ, ಮಾರುತಿ ಕಂಬಾರ, ಶ್ರೀಕಾಂತ್ ಭಜಂತ್ರಿ, ಯಂಕಪ್ಪ ಭಜಂತ್ರಿ, ಚಂದ್ರು ಭಜಂತ್ರಿ, ಶಿವು ಭಜಂತ್ರಿ, ವಿವೇಕ ಬಾರಸ್ಕಳ ಸೇರಿದಂತೆ ವಾರ್ಡಿನ ಜನರು ಒಂದು ತಿಂಗಳ ಒಳಗಾಗಿ ನಿರ್ಮಿಸಬೇಕೆಂದು ಒತ್ತಾಯಿಸಿದ್ದಾರೆ. ಒಂದು ವೇಳೆ ನಿರ್ಮಿಸದಿದ್ದಲ್ಲಿ ಪಟ್ಟಣ ಪಂಚಾಯತ ಎದುರಿಗೆ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

# ಸಾಮಾಜಿಕ ಪರಿವರ್ತನೆಗೆ ಬುನಾದಿ ಹಾಕಿದ ಪವಿತ್ರ ಭೂಮಿ ನಮ್ಮದು: ಪಟೇಲ್



**ಕೊಪ್ಪಳ:** ಕನ್ನಡ ಭಾಷೆ ಸಾಹಿತ್ಯ ಕಲೆ ಧರ್ಮ ಮೊದಲಾದ ಕ್ಷೇತ್ರಗಳಿಗೆ ಗಮನಾರ್ಹ ಕೊಡುಗೆ ನೀಡಿ ಸಾಮಾಜಿಕ ಪರಿವರ್ತನೆಗೆ ಬು ನಾದಿ ಹಾಕಿದ ಕಲ್ಯಾಣ ಕರ್ನಾಟಕದ ಪವಿತ್ರ ಭೂಮಿ ನಮ್ಮದು ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್ ಹೇಳಿದರು.

ಅವರು ಇತ್ತೀಚಿಗೆ ಕೊಪ್ಪಳ ನಗರಸಭೆ ಆವರಣದಲ್ಲಿ ಕಲ್ಯಾಣ ಕರ್ನಾಟಕ ಉತ್ಸವದ ಪ್ರಯುಕ್ತ ನಗರಸಭೆ ಏರಿಡಸಿದ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು, ಇತಿಹಾಸ ಬಲ್ಲವರು ಇತಿಹಾಸ ನಿರ್ಮಿಸಬಲ್ಲರು ಎಂಬಂತೆ ಈ ಪ್ರದೇಶದಲ್ಲಿ ಮಹಾನ್ ಮಾನವತವಾದಿ ಬಸವಣ್ಣ ನವರು ಅಪಾರ ಕೊಡುಗೆ ನೀಡಿದ್ದಾರೆ ಈ ಭೂಮಿ ಪುಣ್ಯದ ನಾಡು, ಇಲ್ಲಿ ವಾಸಿಸುವ ನಾವೇ ಪುಣ್ಯವಂತರು, 1947ಆಗಸ್ಟ್15ರಂದು ಇಡೀನಮ್ಮ ಭಾರತ ದೇಶ ಸ್ವಾತಂತ್ರಗೊಂಡರು ನಿಜಾಮನ ಕಪಿಮುಷ್ಠಿಯಲ್ಲಿದ್ದ ಹೈದರಾಬಾದ್ ಕರ್ನಾಟಕಪ್ರದೇಶ ಸೆಪ್ಟೆಂಬರ್ 17ರಂದು ವಿಮೋಚನೆ ಗೊಂಡಿತು ಅಂದಿನ ಗ್ರಹ ಮಂತ್ರಿ ಸರ್ದಾರ್ ವಲ್ಲಭಾಯಿ ಪಟೇಲ್ ರವರ ಧಿಟ್ಟಕ್ರಮದಿಂದ ಹಾಗೂ ಈ ಭಾಗದ ಸ್ವತಂತ್ರಹೋರಾಟಗಾರರ ಸತತ ಪ್ರಯತ್ನ ಹೋರಾಟ ಮತ್ತು ಬಲಿದಾನದಿಂದ ನಮಗೆ ಸ್ವತಂತ್ರ ಸಿಕ್ಕಿದೆ ಅವರೆಲ್ಲರ ಸ್ಮರಣೆ ನಮ್ಮೆಲ್ಲರ ಜವಾಬ್ದಾರಿ, ಅವರು ಹಾಕಿಕೊಟ್ಟ ಮಾರ್ಗದಲ್ಲಿ ಪರಸ್ಪರ ರಾಷ್ಟ್ರೀಯ ಭಾವೈಕ್ಯತೆ ಬೆಳೆಸಿಕೊಂಡು ಜೀವನ ಸಾಗಿಸಬೇಕು ಎಂದರು . ಮುಂದುವರಿದು ಮಾತನಾಡಿದ ಅವರು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಪ್ರತ್ಯೇಕ ಅಭಿವೃದ್ ಅಭಿವೃದ್ಧಿ ಮಂಡಳಿ ರಚಿಸಿ ಹಿಂದುಳಿದ ಈ ಭಾಗಕ್ಕೆ ಹೆಚ್ಚಿನ ಒತ್ತು ನೀಡಿ ಅಭಿವೃದ್ಧಿಗೆ ಸಹಕಾರ ನೀಡಿದ ಸಾವಿರಾರು ಕೋಟಿ ಅನುದಾನ ನೀಡುವದರ ಮುಖಾಂತರ ಈ ಭಾಗ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಕ್ರಮ ವಹಿಸಿದ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದ ಅವರು ಮುಂದುವರೆದು ಮಾತನಾಡಿ ಈ ಭಾಗಕ್ಕೆ 371 ಜೆ ಕೊಡುವ ದರ ಮುಖಾಂತರ ಈ ಭಾಗಕ್ಕೆ ಹೆಚ್ಚಿನ ಉದ್ಯೋಗ ಮತ್ತು ಶೈಕ್ಷಣಿಕವಾಗಿ ಬೆಳೆಯಲು ಕಾರಣಕರ್ತರಾದ ಕಲ್ಯಾಣ ಕರ್ನಾಟಕ ಭಾಗದ ಧೀಮಂತ ನಾಯಕರಾದ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ್ ಖರ್ಗೆ ಸಾಹೇಬರಿಗೆ ಇವತ್ತು ನೆನೆಸಿಕೊಳ್ಳುವ ದಿನ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆಯ ಉಪಾಧ್ಯಕ್ಷರಾದ ಅಶ್ವಿನಿ ಭಗತ್ ಗದಗಿನಮಟ್ರವರು ನಗರಸಭೆಯ ಸದಸ್ಯರುಗಳಾದ ಮುತ್ತುರಾಜ್ ಕುಷ್ಟಗಿ ಅಜೀಮ್ ಅತ್ತಾರ್ ಗುರುರಾಜ್ ಹಲಗೇರಿ ಸ್ಥಾಯಿ ಸಮಿತಿ ಅಧ್ಯಕ್ಷ ಬಸಯ್ಯ ಹಿರೇಮಠ ಪೌರಾಯುಕ್ತರು ಅಧಿಕಾರಿ ವರ್ಗದವರು ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು,

# ‘ಹೋರಾಟ ನೆನಪಿಸುವ ಲಡಾಯಿ ಕಟ್ಟೆ’



**ಯಲಬುರ್ಗಾ:** ‘ಇಲ್ಲಿಯ ಹೋರಾಟಗಾರರು ದಿಟ್ಟತನಕ್ಕೆ ಹೆಸರಾದವರು, ಇವರ ಹೋರಾಟದಲ್ಲಿ ಹೆಜ್ಜೆಗುರುತುಗಳು ಸ್ಮರಣೀಯವಾಗಿವೆ. ಅಂತಹವುಗಳಲ್ಲಿ ಕರಮುಡಿ ಹತ್ತಿರದ ಹಾಲಕೇರಿ ಸೀಮಾದಲ್ಲಿರುವ ಲಡಾಯಿ ಕಟ್ಟೆಯೇ ಸಾಕ್ಷಿ. ಇದನ್ನು ಒಂದು ಸ್ಮಾರಕವನ್ನಾಗಿ ಮಾಡಿ ಜೀವಂತವಾಗಿಡುವ ಕೆಲಸ ಆಗಬೇಕಾಗಿದೆ’ ಎಂದು ಮಾಜಿ ಸಚಿವ, ಸ್ಕೌಟ್ ಮತ್ತು ಗೈಡ್ಸ್‌ನ ರಾಜ್ಯ ಘಟಕದ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಹೇಳಿದರು.

ತಾಲ್ಲೂಕಿನ ಕರಮುಡಿ ಗ್ರಾಮದಲ್ಲಿ ನಿಂಗೋಜಿ ಶಿಕ್ಷಣ ಸಂಸ್ಥೆಯು ಆಯೋಜಿಸಿದ್ದ 78ನೇ ಕಲ್ಯಾಣ ಕರ್ನಾಟಕ ಉತ್ಸವದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗ್ರಾಪಂ ಅಧ್ಯಕ್ಷ ಲಿಂಗರಾಜ ಉಳ್ಳಾಗಡ್ಡಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಆಯುಕ್ತರಾದ ಎಚ್. ಎಂ.ಸಿದ್ರಾಮಸ್ವಾಮಿ, ಪ್ರೊ.ವಿ.ಎ. ನಿಂಗೋಜಿ, ಶಿಕ್ಷಕ ಬಸವರಾಜ ಕೊಂಡಗುರಿ, ಸಂಪನ್ಮೂಲ ವ್ಯಕ್ತಿ ಭೀಮಪ್ಪ ಹವಳಿ ಮಾತನಾಡಿದರು. ಸ್ಕೌಟ್ ಹಾಗೂ ಗೈಡ್ಸ್‌ನ ರಾಜ್ಯಸಂಘಟನಾ ಆಯುಕ್ತೆ ಸಿ.ಮಂಜುಳಾ, ಕಲ್ಯಾಣ ಕರ್ನಾಟಕದ ಉಸ್ತುವಾರಿ ಮಲ್ಲೇಶ್ವರಿ, ಮಲ್ಲಿಕಾರ್ಜುನ ಚೌಕಿಮಠ, ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಶಿಕಾಂತ ನಿಂಗೋಜಿ, ರಾಮಣ್ಣ ಪ್ರಭಣ್ಣವರ, ಕೆ.ಎಸ್.ಕುರಿ, ಬಸವವಾಜ ಕಿಳ್ಳಿಕ್ಯಾತರ, ಶಿವಪುತ್ರಪ್ಪ ಮಲಿಗೋಡದ, ನಿಖಿಲ್ ಗೊಂಗಡಶೆಟ್ಟಿ, ಎಸ್.ವಿ.ಪೊಲೀಸ್‌ಪಾಟೀಲ, ವಿರೇಶ ಪತ್ತಾರ, ಪ್ರಕಾಶ,, ವಿರೇಶ, ಷಷ್ಮುಖಪ್ಪ ಇದ್ದರು. ಶ್ವೇತಾ ನವಲಗುಂದ ನಿರೂಪಿಸಿದರು. ನಜ್ಮಾ ಬೇಗಂ ಸ್ವಾಗತಿಸಿದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೀರಣ್ಣ ನಿಂಗೋಜಿ ವಂದಿಸಿದರು.

ರಾಯರಡ್ಡಿ ಸಿಎಂ ಸ್ಥಾನಕ್ಕೆ ಯೋಗ್ಯ ವ್ಯಕ್ತಿ’: ‘ಸ್ಥಳೀಯ ಶಾಸಕ ಬಸವರಾಜ ರಾಯರಡ್ಡಿಯವರು ಸಂಘಟನಾ ಚತುರರು, ಅಭಿವೃದ್ಧಿಯ ಬಗ್ಗೆ ಹಲವು ದೃಷ್ಟಿಕೋನದಲ್ಲಿ ವಿವೇಚಿಸಿ ನಿರ್ಣಯ ಕೈಗೊಳ್ಳುವ ವಿಶೇಷ ಜ್ಞಾನವುಳ್ಳವರು. ಶಾಸಕರಾಗಿ, ಸಂಸದರಾಗಿ, ಸಚಿವರಾಗಿ ಅನುಭವ ಹೊಂದಿ ಉತ್ತಮ ಆಡಳಿತ ನಡೆಸುತ್ತಿರುವವರು. ದೇಶ ವಿದೇಶಗಳನ್ನು ಸುತ್ತಾಡಿದವರು ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನವನ್ನು ಹೊಂದಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಲು ಯೋಗ್ಯ ರಾಗಿದ್ದಾರೆ. ರಾಯರಡ್ಡಿ ಮತ್ತು ನಾನು ಒಂದೇ ಸಮಯದಲ್ಲಿ ರಾಜಕೀಯ ಪ್ರವೇಶ ಮಾಡಿದವರು, ಆತ್ಮೀಯ ಸ್ನೇಹಿತ ಕೂಡಾ, ಆ ಕಾರಣಕ್ಕಾಗಿ ಮೆಚ್ಚುಗೆ ಮಾತುಗಳನ್ನಾಡುತ್ತಿಲ್ಲ’ ಎಂದು ಸಿಂಧ್ಯಾ ಹೇಳಿದರು.

# ಆಗಸ್ಟ್ ಮಳೆಗೆ 188.45 ಹೆಕ್ಟೇರ್ ಬೆಳೆಹಾನಿ



**ಕೊಪ್ಪಳ:** ವಾಡಿಕೆಗಿಂತಲೂ ಹೆಚ್ಚು ಹಾಗೂ ಅಗತ್ಯವಿರದ ಸಂದರ್ಭದಲ್ಲಿ ಆಗಸ್ಟ್‌ನಲ್ಲಿ ಸಾಕಷ್ಟು ಮಳೆಯಾದ ಪರಿಣಾಮ ಜಿಲ್ಲೆಯಲ್ಲಿ ಕೃಷಿಯ 168.45 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ಇದರಲ್ಲಿ ಕುಷ್ಟಗಿ ತಾಲ್ಲೂಕಿನಲ್ಲಿಯೇ ಹಾನಿ ಪ್ರಮಾಣ ಹೆಚ್ಚಾಗಿದೆ.

ತೋಟಗಾರಿಕೆ ಬೆಳೆಗಳಾದ ಬಾಳೆ, ದಾಳಿಂಬೆ, ಮಾವು ಸೇರಿದಂತೆ ಒಟ್ಟು 25 ಹೆಕ್ಟೇರ್‌ನಷ್ಟು ಹಾನಿಯಾಗಿದ್ದು, ಜಿಲ್ಲೆಯಲ್ಲಿ ಒಟ್ಟು ಹಾನಿಯ ಪ್ರಮಾಣ 188.45 ಹೆಕ್ಟೇರ್‌ನಷ್ಟು ಆಗಿದೆ.

ಈ ಸಲ ಪೂರ್ವ ಮುಂಗಾರಿನಲ್ಲಿ ಉತ್ತಮ ಮಳೆಯಾಗಿದ್ದರಿಂದ ಗಂಗಾವತಿ, ಕಾರಟಗಿ, ಕನಕಗಿರಿ ಭಾಗ ಹೊರತುಪಡಿಸಿ ರೈತರು ತೊಗರಿ, ಮೆಕ್ಕೆಜೋಳ ಹೆಚ್ಚು ಬಿತ್ತನೆ ಮಾಡಿದ್ದರು. ರಾಜ್ಯದ ದಕ್ಷಿಣ ಭಾಗದ ಮತ್ತು ಕಲ್ಯಾಣ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ನಿರಂತರವಾಗಿ ಮಳೆ ಸುರಿದು ಜನರ ಬದುಕು ಮೂರಾಬಟ್ಟೆಯಾಗಿತ್ತು. ಆದರೆ ಜಿಲ್ಲೆಯಲ್ಲಿ ಕೆಲವು ದಿನಗಳ ಕಾಲ ನಿರಂತರ ಮಳೆ ಸುರಿದರೆ, ಇನ್ನೂ ಕೆಲವು ದಿನಗಳ ಕಾಲ ಮಳೆಯ ದರ್ಶನವೇ ಇಲ್ಲದಂತಾಗಿತ್ತು. ಬಿಡುವು ನೀಡಿ ಸುರಿದ ಮಳೆಯಿಂದಾಗಿ ಯೂರಿಯಾ ರಸಗೊಬ್ಬರದ ಕೊರತೆಯೂ ಆಯಿತು.

ಹೀಗೆ ಮಳೆಯ ಏರಿಳಿತದ ಪರಿಣಾಮ ಕೃಷಿ ಮೇಲೂ ಆಗಿದ್ದು, ಅನೇಕ ರೈತರಿಗೆ ಅಗತ್ಯವಿದ್ದ ಸಂದರ್ಭದಲ್ಲಿ ಮಳೆ ಬಾರಲಿಲ್ಲ. ಇನ್ನೂ ಕೆಲ ಸಂದರ್ಭದಲ್ಲಿ ಫಸಲು ಕೈಗೆ ಬರಲು ಸಿದ್ಧವಾಗಿದ್ದಾಗ ಧೋ ಎಂದು ಮಳೆ ಸುರಿದಿದ್ದ ಹಾನಿಗೆ ಕಾರಣವಾಗಿದೆ ಎನ್ನುತ್ತಾರೆ ರೈತರು.

ತೊಗರಿ ಗರಿಷ್ಠ ಹಾನಿ: ಜಿಲ್ಲೆಯಲ್ಲಿ ಆಗಸ್ಟ್ ಮಳೆಯಿಂದಾಗಿ ತೊಗರಿ ಬೆಳೆಗೆ ಗರಿಷ್ಠ ಪ್ರಮಾಣದಲ್ಲಿ ಹಾನಿಯಾಗಿದೆ. ಒಟ್ಟು 73.92 ಹೆಕ್ಟೇರ್ ಪ್ರದೇಶ ಕುಷ್ಟಗಿ ತಾಲ್ಲೂಕು ವ್ಯಾಪ್ತಿಯಲ್ಲಿ ತೊಗರಿ ಹಾಳಾಗಿದ್ದು, ಇದೇ ತಾಲ್ಲೂಕಿನ ವಣಗೇರಿ (10.85 ಹೆಕ್ಟೇರ್), ಟಕ್ಕಳಕಿ (14.84), ಮುದೇನೂರು (6.78), ಶಿರಗುಂಪಿ (8.44), ಕಿಡದೂರು (9) ಬೆಳೆ ನಷ್ಟವಾಗಿದೆ ಎನ್ನುವುದು ಕೃಷಿ ಇಲಾಖೆ ಅಧಿಕಾರಿಗಳು ದಾಖಲಿಸಿದ ಪ್ರಾಥಮಿಕ ವರದಿಯಿಂದ ಗೊತ್ತಾಗಿದೆ.

ಜಿಲ್ಲೆಯಲ್ಲಿ ಮೆಕ್ಕಜೋಳ ಒಟ್ಟು 36.54 ಹೆಕ್ಟೇರ್‌ನಷ್ಟು ಹಾಳಾಗಿದ್ದು ಕುಕನೂರು ತಾಲ್ಲೂಕಿನಲ್ಲಿ 16.4, ಯಲಬುರ್ಗಾ ತಾಲ್ಲೂಕಿನಲ್ಲಿ ಆರು ಹಾಗೂ ಕುಷ್ಟಗಿ ತಾಲ್ಲೂಕಿನಲ್ಲಿ 14.09 ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಜೋಳ ನೆಲಕ್ಕೊರಗಿದೆ. ಹತ್ತಿ ಬೆಳೆಯಿಂದ ಉತ್ತಮ ಆದಾಯದ ನಿರೀಕ್ಷೆಯಲ್ಲಿದ್ದ ರೈತರಿಗೆ ಮಳೆಯಿಂದಾಗಿ 25.31 ಹೆಕ್ಟೇರ್‌ನಷ್ಟು ಹಾನಿಯ ಸಂಕಷ್ಟ ಎದುರಾಗಿದ್ದು, ಇದರಲ್ಲಿ 23.71 ಹೆಕ್ಟೇರ್‌ನಲ್ಲಿ ಹತ್ತಿ ಮಳೆ ನೀರಿನ ಪಾಲಾಗಿದೆ.

ಇನ್ನುಳಿದಂತೆ ಸಜ್ಜೆ, ಹೆಸರು, ಜೋಳ, ಸಜ್ಜೆ, ಶೇಂಗಾ, ಸೂರ್ಯಕಾಂತಿ, ಎಳ್ಳು ಮತ್ತು ಕಬ್ಬು ಅಲ್ಪಪ್ರಮಾಣದಲ್ಲಿ ಹಾನಿಯಾಗಿದೆ.

# ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆ–2025: ನಿಗಿದಿತ ನಮೂನೆಯಲ್ಲಿ ಮಾಹಿತಿ ದಾಖಲಿಸಲು ಸೂಚನೆ

**ಕೊಪ್ಪಳ :** ಕೊಪ್ಪಳ ಜಿಲ್ಲೆಯಲ್ಲಿ ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆ–2025ಯನ್ನು ಕೈಗೊಂಡಿದ್ದು, ದೇವದಾಸಿ ಪಟ್ಟಿಯಲ್ಲಿರುವ ಮತ್ತು ಹೊಸದಾಗಿ ಸೇರ್ಪಡೆ ಬಯಸುವ ದೇವದಾಸಿ ಮಹಿಳೆಯರು ಮತ್ತು ಮಹಿಳೆಯ ಕುಟುಂಬದವರು ಸಮೀಕ್ಷೆಯಲ್ಲಿ ನಿಗದಿತ ನಮೂನೆಯಲ್ಲಿ ಮಾಹಿತಿ ಒದಗಿಸಲು ಕೋರಿದೆ.

ಈಗಾಗಲೇ ಸರ್ಕಾರದಿಂದ 1993–94 ಮತ್ತು 2007–08ನೇ ಸಾಲುಗಳಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಇದ್ದು, ಮರಣ ಹೊಂದಿರುವ ದೇವದಾಸಿ ಮಹಿಳೆಯ ಕುಟುಂಬದ ಅಧಿಕೃತ ಸದಸ್ಯರು ನಮೂನೆ–1 ರಲ್ಲಿ ಮಾಹಿತಿ ದಾಖಲಿಸಬೇಕು. ಈ ಹಿಂದೆ 1993–94 ಮತ್ತು 2007–08ನೇ ಸಾಲುಗಳಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಹೊರಗುಳಿದ, ಹಾಲಿ ಜೀವಂತವಿರುವ ಹೊಸದಾಗಿ ದೇವದಾಸಿ ಪಟ್ಟಿಗೆ ಸೇರ್ಪಡೆ ಬಯಸುವ ದೇವದಾಸಿ ಮಹಿಳೆಯರು ನಮೂನೆ–2 ರಲ್ಲಿ ಮಾಹಿತಿ ದಾಖಲಿಸಬೇಕು. ಈ ಹಿಂದೆ 1993–94 ಮತ್ತು 2007–08ನೇ ಸಾಲುಗಳಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಹೊರಗುಳಿದ ಮತ್ತು ಪ್ರಸ್ತುತ ಮರಣ ಹೊಂದಿರುವ ಮಹಿಳೆಯರ ಕುಟುಂಬದ ಅಧಿಕೃತ ಸದಸ್ಯರು ನಮೂನೆ–3 ರಲ್ಲಿ ಮಾಹಿತಿಯನ್ನು ದಾಖಲಿಸಬೇಕು.

ಅಗತ್ಯ ವಿವರಗಳೊಂದಿಗೆ ಅರ್ಜಿಯನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳಾದ ಮಹಿಳೆಯ ಆಧಾರ ಕಾರ್ಡ್, ಮಹಿಳೆಯ ಮರಣ ಪ್ರಮಾಣ ಪತ್ರ, ವಂಶವೃಕ್ಷ, ಕುಟುಂಬದ ಅಧಿಕೃತ ಸದಸ್ಯರ ಆಧಾರ ಕಾರ್ಡ್, ಹೊಸ ಸೇರ್ಪಡೆ ಬಯಸುವ ಮಹಿಳೆಯರ ವಯಸ್ಸಿನ ದೃಢೀಕರಣ ಪತ್ರಗಳೊಂದಿಗೆ ಅರ್ಜಿಯನ್ನು ಸಂಬಂಧಪಟ್ಟ ತಾಲ್ಲೂಕುಗಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇಲ್ಲಿಗೆ ಅಕ್ಟೋಬರ್ 2 ರೊಳಗೆ ಸಲ್ಲಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಹಾಗೂ ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆಯ ಜಿಲ್ಲಾ ಮಟ್ಟದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರೋಗ್ಯ ಶಿಬಿರ: 395 ಜನರು ಭಾಗಿ




**ಕೊಪ್ಪಳ :** ತಾಲ್ಲೂಕಿನ ಬೇವಿನಹಳ್ಳಿಯ ಕಿರ್ಲೋಸ್ಕರ್ ಫೆರಸ್ ಕಂಪನಿಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ನಗರದಮಧುಶ್ರೀಗಾರ್ಡನ್‌ನಲ್ಲಿಬುಧವಾರ ಏರ್ಪಡಿಸಿದ್ದ ಶಿಬಿರದಲ್ಲಿ 395 ಜನರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಕಿರ್ಲೋಸ್ಕರ್ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಹುಬ್ಬಳ್ಳಿಯ ವಿಹಾನ್ ಹೃದಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಸ್ಥಳೀಯ ಕೆ.ಎಸ್. ಆಸ್ಪತ್ರೆ, ರೆಡ್ ಕ್ರಾಸ್ ಸಂಸ್ಥೆ, ಸರ್ವೋದಯ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ ಶಿಬಿರವನ್ನು ಸಂಸದ ರಾಜಶೇಖರ ಹಿಟ್ನಾಳ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 'ದೇಶದ ಅಭಿವೃದ್ಧಿಗೆ ಕೈಗಾರಿಕೆಗಳು ಅಗತ್ಯವಿದ್ದು, ಉದ್ಯೋಗ ಸೃಷ್ಟಿಯಾಗುತ್ತವೆ. ಕೈಗಾರಿಕೆಗಳು, ಮಾಲಿನ್ಯ ತಡೆಗೆ ಸುಧಾರಿತ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು' ಎಂದು ಹೇಳಿದರು.

ಕಂಪನಿ ಕಾರ್ಯನಿರ್ವಾಹಕ ಉಪಾಧ್ಯಕ್ಷ ಪಿ.ನಾರಾಯಣ ಮಾತನಾಡಿ, 'ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಮ್ಮಿಕೊಂಡಿರುವಸಾಮಾಜಿಕಕಾರ್ಯಗಳ ಮಾಹಿತಿ ನೀಡಿದರು. ಕಂಪನಿಯ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಆರ್.ವಿ.ಗುಮಾಸ್ತೆ ಮಾತನಾಡಿದರು.

ಇದೇ ಸಂದರ್ಭದಲ್ಲಿ 200 ಜನ ದಾನಿಗಳು ರಕ್ತದಾನ ಮಾಡಿದರು.

ಹುಬ್ಬಳ್ಳಿಯ ವಿಹಾನ್ ಆಸ್ಪತ್ರೆಯ ವೈದ್ಯರು, ಕಾರ್ಖಾನೆಯ ಹಿರಿಯ ಅಧಿಕಾರಿಗಳು, ಮಹಿಳಾ ಕ್ಲಬ್‌ನ ಸದಸ್ಯರು ಹಾಜರಿದ್ದರು. ಶಿವಯ್ಯಸ್ವಾಮಿ ಸ್ವಾಗತಿಸಿದರು. ರಮೇಶ ದೀಕ್ಷಿತ ನಿರೂಪಿಸಿದರು. ಉದ್ಧವ್ ಕುಲಕರ್ಣಿ ವಂದಿಸಿದರು.

# ಉಪವಿಭಾಗಾಧಿಕಾರಿ, ತಹಶೀಲ್ದಾರ್ ವಿರುದ್ಧ ದೂರು




**ಕೊಪ್ಪಳ:** ಜಿಲ್ಲೆಯ ನಿವೃತ್ತ ಯೋಧರು, ಹುತಾತ್ಮ ಯೋಧರ ಅವಲಂಬಿತರು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅವರ ಅವಲಂಬಿತರಿಗೆ ನಿಯಮಾನುಸಾರ ಸರ್ಕಾರದ ಸೌಲಭ್ಯ ಕಲ್ಪಿಸದ ಜಿಲ್ಲೆಯ ಅಧಿಕಾರಿಗಳ ವಿರುದ್ಧ ರಾಜ್ಯದ ಉಪ ಲೋಕಾಯುಕ್ತ ನ್ಯಾ.ಬಿ.ವೀರಪ್ಪ ಅವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

ಸರ್ಕಾರದಿಂದದೊರೆಯಬೇಕಾದನಿವೇಶನ ನಿಗದಿತ ಸಮಯದಲ್ಲಿ ನೀಡದೆ ಸರ್ಕಾರಿ, ಸಾರ್ವಜನಿಕ ನೌಕರ, ಅಧಿಕಾರಿಗಳು ಭ್ರಷ್ಟಾಚಾರ ನಡೆಸುತ್ತಿರುವುದು ಹಾಗೂ ಸಂವಿಧಾನಾತ್ಮಕವಾಗಿ ನೀಡಬೇಕಾದ ಪರಿಹಾರವನ್ನು (ಜಮೀನು) ಕಲ್ಪಿಸುವಲ್ಲಿ ನಿರ್ಲಕ್ಷತನ ಮತ್ತು ವಿಳಂಬ ಧೋರಣೆ ತೋರಿದ ಆರೋಪದ ಮೇಲೆ ಅವರು ಈ ಕ್ರಮ ತೆಗೆದುಕೊಂಡಿದ್ದಾರೆ.

ಉಪ ವಿಭಾಗಾಧಿಕಾರಿ ಮಹೇಶ್ ಮಾಲಗಿತ್ತಿ, ಕೊಪ್ಪಳ ತಹಶೀಲ್ದಾರ್ ವಿಠ್ಠಲ್ ಚೌಗಲಾ, ಗಂಗಾವತಿ ತಹಶೀಲ್ದಾರ್ ಯು. ನಾಗರಾಜ, ಕುಷ್ಟಗಿತಹಶೀಲ್ದಾರ್‌ಅಶೋಕಎಸ್.ಶಿಗ್ಗಾವಿ, ಯಲಬುರ್ಗಾ ತಹಶೀಲ್ದಾರ್ ಬಸವರಾಜ, ಕಾರಟಗಿ ತಹಶೀಲ್ದಾರ್ ಕುಮಾರಸ್ವಾಮಿ, ಕನಕಗಿರಿ ತಹಶೀಲ್ದಾರ್ ವಿಶ್ವನಾಥ ಮುರಡಿ, ಕುಕನೂರು ತಹಶೀಲ್ದಾರ್ ಎಚ್. ಪ್ರಾಣೇಶ ಅವರ ವಿರುದ್ಧ ದೂರು ದಾಖಲು ಮಾಡಿಕೊಂಡಿದ್ದಾರೆ.

# ಬೇಡಿಕೆ ಈಡೇರಿಕೆಗೆ ರೈತ ಸಂಘ ಆಗ್ರಹ



**ಕನಕಗಿರಿ :** ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹಸಿರು ಸೇನೆ ಹಾಗೂ ರೈತ ಸಂಘಟನೆಯ ಪದಾಧಿಕಾರಿಗಳು ಸಾವಿತ್ರಿ ಪಾಟೀಲ ಅವರಿಗೆ ಮನವಿ ಸಲ್ಲಿಸಿದರು.

ತಾಲ್ಲೂಕು ಅಧ್ಯಕ್ಷ ಗಣೇಶ ರೆಡ್ಡಿ ಮಾತನಾಡಿ ಎಪಿಎಂಸಿಯ ನೀಲ ನಕಾಶೆ ಪ್ರಕಾರವಾಗಿ ಎಪಿಎಂಸಿ ಸುತ್ತಲೂ ನಿರ್ಮಿಸಬೇಕು. ಹಳೆಯ ಎಪಿಎಂಸಿ ಹೊರಗೋಡೆಯನ್ನು ತೆರವುಗೊಳಿಸಿದವರ ವಿರುದ್ಧ ಕಾನೂನು ಪ್ರಕಾರ ಶಿಸ್ತು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಬ್ಲೂ ಪ್ರಿಂಟ್ ನಿಯಮ ಉಲ್ಲಂಘನೆ ಮಾಡಿರುವವರ ವಿರುದ್ದ ಸೂಕ್ತ ಕ್ರಮ ಜರುಗಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ, ಎಂದು ದೂರಿದರು. ಎಪಿಎಂಸಿಯ ಪರವಾನಿಗಿ ಪಡೆದು ಕೃಷಿಯೇತರ ಚಟುವಟಿಕೆಗಳಿಗೆ ಮಳಿಗೆಗಳನ್ನು ಬಾಡಿಗೆ ನೀಡಿರುವವರ ವಿರುದ್ಧ ಏಕೆ ಕ್ರಮ ಜರುಗಿಸಿಲ್ಲ ಎಂದು ಪ್ರಶ್ನಿಸಿದರು.

ಎಪಿಎಂಸಿಯಲ್ಲಿ ರೈತರಿಗೆ ವ್ಯವಹಾರಿಕವಾಗಿ ಮೋಸವಾಗುತ್ತಿದೆ ಇದನ್ನು ಅಧಿಕಾರಿಗಳು ತಡೆಗಟ್ಟಬೇಕೆಂದು ಆಗ್ರಹಿಸಿದರು.

ಪ್ರಮುಖರಾದ ಕೃಷ್ಣಪ್ಪ ಚಲವಾದಿ, ಸಗರಪ್ಪ ಕಂಪ್ಲಿ, ಸಣ್ಣ ಹನುಮನಗೌಡ ಬಸರಿಹಾಳ, ಮರಿಯಪ್ಪ ಹುಗ್ಗಿ,
ದುರ್ಗಪ್ಪ ತಿಪ್ಪನಾಳ,
ತಿಪ್ಪಾರೆಡ್ಡಿ ಹುಲಿಹೈದರ, ಮರಿಯಪ್ಪ, ಪಾಮಣ್ಣ ಪೂಜಾರ, ಕೃಷ್ಣ ಕಾಕಿ. ವೀರೇಶ ಬಾವಿಕಟ್ಟಿ, ನಾಗೇಶ ಪೂಜಾರ, ಕನಕಪ್ಪ ಸಿರಿವಾರ ಇದ್ದರು.

# ಮನುಷ್ಯ ಹುಟ್ಟಿದ ಮೇಲೆ ಪರೋಪಕಾರಕ್ಕಾಗಿ ದಾನ ಮಾಡಬೇಕು



**ಐನಾಪುರ :** ಮನುಷ್ಯ ಹುಟ್ಟಿ ಬಂದ ಮೇಲೆ ತಾನು ಕಷ್ಟಪಟ್ಟು ಸಂಪಾದನೆ ಮಾಡಿದ ಹಣದಲ್ಲಿ ಪರೋಪಕಾರಕ್ಕಾಗಿ ದಾನ ಮಾಡಬೇಕು. ದೇವರು ತಾವು ಮಾಡಿದ ಧಾನವನ್ನು ಅಧಿಕಾರ, ಭೂಮಿ,ಆಸ್ತಿ–ಅಂತಸ್ತು ರೂಪದಲ್ಲಿ ಮರಳಿ ಕೊಡುತ್ತಾನೆ. ಅಂತಹ ಧಾನ ಶೂರರಲ್ಲಿ ಐನಾಪೂರದ ರಾಕೇಶ ವಿಶ್ವನಾಥ ಕಾರ್ಚಿ ಇವರು "ಆಧುನಿಕ ದಾನ ಶೂರ ಕರ್ಣ" ಎಂದೇ ಹೆಸರಾಗಿದ್ದಾರೆ. ಎಂದು ಐನಾಪೂರ–ಕೃಷ್ಣಾಕಿತ್ತೂರ ಗುರುದೇವಾಶ್ರಮದ ಪ.ಪೂ ಬಸವೇಶ್ವರ ಮಹಾಸ್ವಾಮಿಗಳು ನುಡಿದರು.

ಅವರು ಪಟ್ಟಣದ ಶ್ರೀ ವಿಶ್ವನಾಥ ದೇವಸ್ಥಾನದ ಮಹಾದ್ವಾರದ ಉಧ್ಘಾಟನೆ ಹಾಗೂ ಪ್ರವನಚ ಮಂಗಲೋತ್ಸವ ಸಮಾರೋಪದಲ್ಲಿ ಆರ್ಶಿವಚನ ನೀಡುತ್ತಾ ಧಾನ ಮಾಡುವದರಿಂದ ಮಾನಸಿಕವಾಗಿ ನೆಮ್ಮದಿ ಸಿಗುತ್ತದೆ. ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ ಎನ್ನುವ ಗಾದೆಯಂತೆ ಧಾನವನ್ನು ಯಾವುದೇ ರೂಪದಲ್ಲಿ ಸಮಾಜಕ್ಕೆ ನೀಡಬೇಕು. ಸಮಾಜ ನನಗೆ ಏನು ಕೊಟ್ಟಿದೆ ಎನ್ನುವದಕ್ಕಿಂತ ನಾನು ಸಮಜಾಕ್ಕೇ ಏನು ನೀಡಿದ್ದೇನೆ ಎನ್ನುವದು ಮುಖ್ಯ ಎಂದರು.

ಮಹಾದಾನಿ ರಾಕೇಶ ಕಾರ್ಚಿ ಇವರು ಶ್ರೀ ವಿಶ್ವನಾಥ ದೇವಸ್ಥಾನದ ಮಹಾಧ್ವಾರಕ್ಕೆ5ಲಕ್ಷ, ಶ್ರೀ ಖಿಳೆಗಾಂವ ಬಸವೇಶ್ವರ ದೇವಸ್ಥಾನಕ್ಕೆ5ಲಕ್ಷ, ಶ್ರೀವೀರಭದ್ರೇಶ್ವರ ದೇವಸ್ಥಾನಕ್ಕೆ5ಲಕ್ಷ. ಬೀರಲಿಂಗೇಶ್ವರ ದೇವಸ್ಥಾನಕ್ಕೆ5ಲಕ್ಷ, ಕೆಆರಈ ಶಿಕ್ಷಣಸಂಸ್ಥೆಗೆ5ಲಕ್ಷ, ಶ್ರೀ ವಿಠ್ಠಲ ಮಂದಿರಕ್ಕೆ4ಲಕ್ಷ, ಜೈನ ಬಸದಿಗೆ3.5ಲಕ್ಷ, ಶ್ರೀದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ1ಲಕ್ಷ, ಇಂದಿರಾನಗರಮಹಾಲಕ್ಷ್ಮಿದೇವಸ್ಥಾನಕ್ಕೆ1ಲಕ್ಷ,ಶ್ರೀವೆಂಕಟೇಶ್ವರದೇವಸ್ಥಾನಕ್ಕೆ1ಲಕ್ಷ,ಅಪ್ಪಂಯ್ಯಾಮುತ್ಯಾದೇವಸ್ಥಾನಕ್ಕೆ50ಸಾವಿರ,ಹೀಗೆ ಇನ್ನೂ ಹಲವಾರು ದೇವಸ್ಥಾನಗಳಿಗೆ ಗುಪ್ತ ದಾನ ನೀಡಿರುವ ಇವರು ಕಲಿಯುಗದ ಕರ್ಣ ಎಂದೇ ಹೆಸರಾಗಿದ್ದಾರೆ.

ಮಹಾದಾನಿ ರಾಕೇಶ ಕಾರ್ಚಿ ಹಾಗೂ ದೇವಸ್ಥಾನಕ್ಕೆ ತನು–ಮನ ಧನದಿಂದ ಸೇವೆ ಸಲ್ಲಿಸಿದ ಅನೇಕ ಭಕ್ತರನ್ನು ಸತ್ಕರಿಸಲಾಯಿತು ಇದೇ ಸಂಧರ್ಭದಲ್ಲಿ ವಿಜಯಪೂರದ ಪ.ಪೂ ಶ್ರೀ ಷಡಕ್ಷರಿ ಮಹಾಸ್ವಾಮಿಗಳು, ಶ್ರೀರಂಗ ಜೋಶಿ, ವಿಶ್ವನಾಥ ಜೋಶಿ,ಶಂಕರಯ್ಯಾ ಮಳಿಮಠ, ಪ್ರಫುಲ್ ಕಾರ್ಚಿ, ಪ್ರೇಮಲತಾ ರಡ್ಡಿ, ಉಮೇಶ ಕಾರ್ಚಿ , ರಾಹುಲ ಕಾರ್ಚಿ, ಅರವಿಂದ ಕಾರ್ಚಿ,ಮೋರೇಶ್ವರ ಪಟವರ್ಧನ, ವಿರೇಶ ಕಾರ್ಚಿ, ಶಿವಪ್ರಸಾದ ಕಾರ್ಚಿ, ಅನೇಕರು ಉಪಸ್ಥಿತರಿದ್ದರು. ವಿರೂಪಾಕ್ಷ ಡೂಗನವರ ನಿರೂಪಿಸಿದರು.ಪ್ರಕಾಶ ಕೊರ್ಬು ಸ್ವಾಗತಿಸಿ ವಂದಿಸಿದರು. "ನಾನೊಬ್ಬ ಸಾಮಾನ್ಯ ರೈತ ದೇವರ ಆರ್ಶಿವಾದದಿಂದ ಜಮೀನಿನಲ್ಲಿ ಕಷ್ಟಪಟ್ಟು ದುಡಿದ ಹಣದಲ್ಲಿ ಸಮಾಜ–ಕ್ಕೆ ಅಲ್ಪ ಕೊಟ್ಟಿದ್ದೇನೆ ಇನ್ನೂ ಭಗವಂತ ದಾನ ಮಾಡುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತೇನೆ."

# ಇಂಪೋರ್ಟ್ ಹ್ಯಾಕ್ ಅಕಾಡೆಮಿಯಾ ರಾಷ್ಟ್ರಮಟ್ಟದ ಹ್ಯಾಕಥಾನ್ ಯಶಸ್ವಿ

# ಬೆಂಗಳೂರಿನ ಆರ್.ವಿ. ಕಾಲೇಜ್‌ಗೆ ಪ್ರಥಮ ಬಹುಮಾನ



**ಬೆಂಗಳೂರು :** ನ್ಯಾಷನಲ್ ಎಜುಕೇಶನಲ್ ಟ್ರಸ್ಟ್ ಆಫ್ ಕರ್ನಾಟಕದ ಜಯನಗರ ನ್ಯಾಷನಲ್ ಕಾಲೇಜಿನಲ್ಲಿ ರಾಷ್ಟ್ರ ಮಟ್ಟದ ಇಂಪೋರ್ಟ್ ಹ್ಯಾಕ್ ಅಕಾಡೆಮಿಯಾ ಹ್ಯಾಕಥಾನ್ ಯಶಸ್ವಿಯಾಗಿದ್ದು, ಬೆಂಗಳೂರಿನ ಆರ್.ವಿ. ಕಾಲೇಜ್ ಗೆ ಮೊದಲ ಸ್ಥಾನ ದೊರೆತಿದೆ.

ನ್ಯಾಷನಲ್ "ಕಾಲೇಜಿನ ಐಟಿ ಕ್ಲಬ್ ಆಲ್ಗೋಜೆನ್ಜ್" ನಿಂದ ಎನ್ಸಿಜೆ ಕ್ಯಾಂಪಸ್ನ ಮಲ್ಟಿಮೀಡಿಯಾ ಹಾಲ್ನಲ್ಲಿ ನಡೆದ ಹ್ಯಾಕಥಾನ್ ಗೆ ಅಭೂತ ಪೂರ್ವ ಬೆಂಬಲ ದೊರೆತಿದ್ದು, ಬೆಂಗಳೂ–ರಿನ ಆರ್.ವಿ. ಕಾಲೇಜ್ ವಿದ್ಯಾರ್ಥಿಗಳು 25 ಸಾವಿರ ರೂ ನಗದು ಬಹುಮಾನವನ್ನು ತನ್ನದಾಗಿಸಿಕೊಂಡರು.

ವಿದ್ಯಾರ್ಥಿಗಳ ನಾವೀನ್ಯತೆಗೆ ಸವಾಲೊಡ್ಡುವ ಹ್ಯಾಕಥಾನ್ ನಲ್ಲಿ ವಿದ್ಯಾರ್ಥಿ ಸಮೂಹ ತನ್ನದೇ ಆದ ರೀತಿಯಲ್ಲಿ ವಿವಿಧ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಿದರು. ಜಗತ್ತಿನ ಅತ್ಯಂತ ಬುದ್ಧಿವಂತ ವಿದ್ಯಾರ್ಥಿ ಸಮೂಹ ಪರಸ್ಪರ ಸಮಾಲೋಚನೆಯಲ್ಲಿ ತೊಡಗಿ ವಿಚಾರ ವಿನಿಮಯ ನಡೆಸಿತು. ನೈಜ ಜ್ವಲಂತ ಸಮಸ್ಯೆಗಳಿಗೆ ತಂತ್ರಜ್ಞಾನದ ಮೂಲಕ ಪರಿಹಾರ ದೊರಕಿಸಿಕೊಡುವ ಕುರಿತು ಚಿಂತನ–ಮಂಥನ ನಡೆಸಿತು. ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ ಅಧ್ಯಕ್ಷ ಡಾ. ಎಚ್. ಎನ್. ಸುಬ್ರಹ್ಮಣ್ಯ, ಉದ್ಯಮಿ ಮತ್ತು ಮಾರ್ಗದರ್ಶಕರಾದ ಸುರೇಶ್ ನರಸಿಂಹ ಅವರು ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಅವರ ಅನನ್ಯ ಪ್ರತಿಭೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ ಗೌರವ ಕಾರ್ಯದರ್ಶಿ ವಿ. ವೆಂಕಟ ಶಿವಾ ರೆಡ್ಡಿ ಮಾತನಾಡಿ, ಇತ್ತೀಚೆಗೆ ನಡೆದ ಅತಿದೊಡ್ಡ ಹ್ಯಾಕಥಾನ್ ಇದಾಗಿದ್ದು, ವಿವಿಧ ರಾಜ್ಯಗಳ 38 ಕಾಲೇಜುಗಳಿಂದ 133 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕೇರಳ, ಜಾರ್ಖಂಡ್, ದೆಹಲಿ, ಕೊಲ್ಕತ್ತಾ, ಮಹಾರಾಷ್ಟ್ರ ಮತ್ತಿತರೆ ರಾಜ್ಯಗಳಿಂದ ವಿದ್ಯಾರ್ಥಿಗಳು ಹ್ಯಾಕಥಾನ್ ನಲ್ಲಿ ಪಾಲ್ಗೊಂಡಿದ್ದು, ಅಪ್ ಗಳನ್ನು ಅಭಿವೃದ್ಧಿಪಡಿಸುವ ಕುರಿತು ಚರ್ಚಿಸಿದರು. ವಿನೂತನ ವರದಿ ಸಿದ್ಧಪಡಿಸುವ, ಕೆಲಸದಲ್ಲಿ ಬದ್ಧತೆ, ಸಂಶೋಧನೆಯಲ್ಲಿ ಆಸಕ್ತಿ ಇರುವುದನ್ನು ವಿದ್ಯಾರ್ಥಿಗಳು ಸಾದರಪಡಿಸಿರುವುದಾಗಿ ತಿಳಿಸಿದರು. ಜಯನಗರ ನ್ಯಾಷನಲ್ ಕಾಲೇಜ್ ಅಧ್ಯಕ್ಷ ಡಾ.ಪಿ.ಎಲ್. ವೆಂಕಟರಾಮ ರೆಡ್ಡಿ, ಎನ್ಸಿಜೆ ಪ್ರಾಚಾರ್ಯರಾದ ಡಾ. ಸಿ. ವಿಜಯಲಕ್ಷ್ಮಿ, ಎನ್.ಸಿ.ಜೆ ಉಪಾಧ್ಯಕ್ಷರಾದ ಪ್ರೊ. ಚೆಲುವಪ್ಪ ಎಸ್, ಕಂಪ್ಯೂಟರ್ ಸೈನ್ಸ್ ವಿಭಾದ ಪ್ರಾಧ್ಯಾಪಕರಾದ ಪ್ರೊ. ಆಶಾ ಟಿ.ಎಸ್ ಮತ್ತಿತರರು ಉಪಸ್ಥಿತರಿದ್ದರು.

# 'ಶಿಕ್ಷಕರು ಟಾರ್ಚ್ ಆಗಬೇಕು'



**ಕೊಪ್ಪಳ:** 'ಎಲ್ಲ ವೃತ್ತಿಗಳಿಗಿಂತಲೂ ಶಿಕ್ಷಕರ ವೃತ್ತಿ ಪುಣ್ಯದ ಕೆಲಸವಾಗಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದ ಮಧುಶ್ರೀ ಗಾರ್ಡನ್‌ನಲ್ಲಿ ಖಾಸಗಿ ಶಾಲೆಗಳ ಒಕ್ಕೂಟದ ವತಿಯಿಂದ ಬುಧವಾರ ನಡೆದ ಶಿಕ್ಷಕರ ದಿನಾಚರಣೆ, ಉತ್ತಮ ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕರ ಋಣವನ್ನು ತೀರಿಸಲು ಎಂದಿಗೂ ಸಾಧ್ಯವಿಲ್ಲ. ಯಾರನ್ನೂ ಬೇಕಾದರೂ ಮರೆಯಬಹುದು ಆದರೆ ಶಿಕ್ಷರನ್ನು ಯಾರು ಮರೆಯುವುದಿಲ್ಲ' ಎಂದರು.

ಗವಿಸಿದ್ಧೇಶ್ವರ ವಿದ್ಯಾವರ್ಧಕ ಟ್ರಸ್ಟ್ ಸದಸ್ಯ ವೀರೇಶ ದೇವರು ಮಾತನಾಡಿ, 'ಶಿಕ್ಷಕರು ವಿದ್ಯಾರ್ಥಿಗಳಿಗೆ ಭವಿಷ್ಯ ಬೆಳಗುವ ದೀಪ. ಈ ನಿಟ್ಟಿನಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಟಾರ್ಚರ್ ಆಗಬಾರದು.

ಬದಲಿಗೆ ಬದುಕು ಬೆಳಗುವ ಟಾರ್ಚ್ ಅಂದರೆ ದೀಪವಾಗಬೇಕು' ಎಂದರು.

ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಮತ್ತು ಸಾವಿತ್ರಿಬಾಯಿ ಫುಲೆ ಅವರ ಭಾವಚಿತ್ರಕ್ಕೆ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಪುಷ್ಪನಮನ ಸಲ್ಲಿಸಿದರು. ಸಂಸದ ಕೆ.ರಾಜಶೇಖರ ಹಿಟ್ನಾಳ ಉತ್ತಮ ಶಿಕ್ಷಕರ ಪ್ರಶಸ್ತಿ ನೀಡಿ, ಸನ್ಮಾನಿಸಿದರು.

ಖಾಸಗಿ ಶಾಲೆಗಳ ಒಕ್ಕೂಟದ ಅಧ್ಯಕ್ಷ ಬಸವರಾಜ ತಳಕಲ್, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ನ ರಾಜ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್, ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸ ಗುಪ್ತಾ, ಜಿಲ್ಲಾ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ರಡ್ಡಿ ಶ್ರೀನಿವಾಸ, ಸಿ.ವಿ.ಚಂದ್ರಶೇಖರ,
ಪ್ರಹ್ಲಾದ್ ಅಗಳಿ, ರಾಘವೇಂದ್ರ ಪಾನಘಂಟಿ, ಗೂಳಪ್ಪ ಹಲಗೇರಿ, ಗುರುರಾಜ ಹಲಿಗೇರಿ, ಮುತ್ತುರಾಜ ಕುಷ್ಟಗಿ ಇದ್ದರು.

# ಸೆ.30 ರಂದು ರೇಬಿಸ್ ರೋಗದ ಕುರಿತು ಜಿಲ್ಲಾ ಮಟ್ಟದ ಅರಿವು ಮೂಡಿಸುವ ಕಾರ್ಯಕ್ರಮ

**ಕೊಪ್ಪಳ :** ಜಿಲ್ಲೆಯನ್ನು 2030 ರ ಅಂತ್ಯಕ್ಕೆ ಹುಚ್ಚುನಾಯಿ ರೋಗ(ರೇಬಿಸ್) ಮುಕ್ತ ಜಿಲ್ಲೆಯನ್ನಾಗಿಸುವ ನಿಟ್ಟಿನಲ್ಲಿ ಸೆ.30 ರಂದು ರೇಬಿಸ್ ರೋಗದ ಕುರಿತು ಜಿಲ್ಲಾ ಮಟ್ಟದ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಜಿಲ್ಲಾ ಪ್ರಾಣಿ ದಯಾ ಸಂಘ ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಸೆ.30 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತಿಯ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ.ಇಟ್ನಾಳ ಅವರು ವಹಿಸಿಕೊಳ್ಳುವರು.

ಕಾರ್ಯಕ್ರಮದಲ್ಲಿ ಜಿಲಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಹಾಯಕ ಆಯುಕ್ತರು, ಜಂಟಿ ಕೃಷಿ ನಿರ್ದೇಶಕರು, ಕಿಮ್ಸ್‌ನಿರ್ದೇಶಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸುವರು. ರೇಬಿಸ್ ರೋಗದ ಕುರಿತು ತಜ್ಞ ವಿಜ್ಞಾನಿಗಳು ಉಪನ್ಯಾಸ ನೀಡುವರು ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕರಾದ ಡಾ.ಪಿ.ಎಂ. ಮಲ್ಲಯ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಾ.ಆನಂದ ಸಂಕೇಶ್ವರರಿಗೆ ಪ್ರತಿಷ್ಠಿತ ಸಿಬಾ ಪುರಸ್ಕಾರ




**ಕಲಬುರಗಿ:** ಸಾರಿಗೆ ಕ್ಷೇತ್ರದ ದಿಗ್ಗಜ ವಿಆರೆಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಆನಂದ ಸಂಕೇಶ್ವರ ಅವರಿಗೆ ಸೌತ್ ಇಂಡಿಯಾ ಬಿಸಿನೆಸ್ ಅವಾರ್ಡ್ಸ್ ಪುರಸ್ಕಾರ ಸಂದಿದ್ದು, ದುಬೈನಲ್ಲಿ ನಡೆದ ಸಮಾರಂಭದಲ್ಲಿ ಅವರನ್ನು ಗೌರವಿಸಲಾಯಿತು.

ದುಬೈನ ಅಲ್ ಹಬ್ತೂರ್ ಪ್ಯಾಲೇಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತದ ಮಾಜಿ ಯುಎಇ ರಾಯಭಾರಿ ಹಾಗೂ ಎಎಜಿ ಚೇರ್ಮನ್ ಡಾ.ಅಹ್ಮದ್ ಅಬ್ದುಲ್ ರೆಹಮಾನ್ ಅಲ್ಬನ್ನಾ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಉದ್ಯಮ, ಸಂಸ್ಕೃತಿ ಮತ್ತು ವಾಣಿಜ್ಯ ವಲಯದಲ್ಲಿ ಜಾಗತಿಕವಾಗಿ ಪ್ರಭಾವ ಬೀರಿರುವವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇದೇ ಸಂದರ್ಭದಲ್ಲಿ, ಸೌತ್ ಇಂಡಿಯಾ ಬಿಸಿನೆಸ್ ಅವಾರ್ಡ್ಸ್ ಪರಿಚಯಿಸಿರುವ ಸೌತ್ ಪವರ್ ಲಿಸ್ಟ್–100 ಅನ್ನು ಅನಾವರಣಗೊಳಿಸಲಾಯಿತು.

ವಿಆರೆಲ್ ಸಮೂಹದ ಎಂಡಿ ಡಾ.ಆನಂದ ಸಂಕೇಶ್ವರ ಅವರು 2025ರ ಪ್ರಶಸ್ತಿ ಪುರಸ್ಕೃತರಲ್ಲಿ ಒಬ್ಬರಾಗಿದ್ದಾರೆ.

ವಿಆರೆಲ್ ಸಂಸ್ಥೆಯನ್ನು ದೇಶದ ಅತಿ ದೊಡ್ಡ ಸಾರಿಗೆ ಕಂಪನಿಯಾಗಿ, ಪ್ರಮಾಣ ಹಾಗೂ ಕಾರ್ಯಾಚರಣೆ ದಕ್ಷತೆಯಲ್ಲಿ ಅತ್ಯಂತ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡು ಬೆಳೆಸುವಲ್ಲಿ ಕೊಡುಗೆ ನೀಡುವುದನ್ನು ಮುಂದುವರಿಸಿದ್ದಾರೆ. ಈ ಗೌರವ ಕೇವಲ ವ್ಯಾಪಾರದ ಯಶಸ್ಸನ್ನು ಮಾತ್ರವಲ್ಲ ಲಾಜಿಸ್ಟಿಕ್ಸ್ ಮೂಲಕ ಬೆಳವಣಿಗೆ ಮತ್ತು ದೇಶದ ಏಕೀಕರಣದಲ್ಲಿ ಅವರ ಪ್ರಮುಖ ಪಾತ್ರವನ್ನು ಎತ್ತಿ ತೋರಿಸುತ್ತದೆ ಎಂದು ಸಂಘಟಕರು ಹೇಳಿದ್ದಾರೆ.

ಸೌತ್ ಪವರ್ ಲಿಸ್ಟ್ 100 ರಲ್ಲಿ ಇರುವ ಹಲವು ರಂಗಗಳ ಸಾಧಕರನ್ನೂ ಗೌರವಿಸಲಾಯಿತು. ಈ ಪಟ್ಟಿಯು ಉದ್ಯಮಗಳು ಮತ್ತು ಪರಂಪರೆಯಲ್ಲಿ ನಾಯಕತ್ವದ ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತದೆ. ಒಟ್ಟಾರೆಯಾಗಿ ಈ ಗೌರವಾನ್ವಿತರು ಜಾಗತಿಕ ವೇದಿಕೆಯಲ್ಲಿ ದಣ ಭಾರತದ ದೂರದೃಷ್ಟಿ ಮತ್ತು ಚೈತನ್ಯವನ್ನು ಪ್ರತಿನಿಧಿಸಿದ್ದಾರೆ ಎಂದು ಎಸ್‌ಐಬಿಎ ಹೇಳಿದೆ.

ಇತರ ಪ್ರಮುಖ ಪುರಸ್ಕೃತರು:

ಅಶೋಕ್ ಖೇಣಿ–ಆಡಳಿತನಿರ್ದೇಶಕರು,ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್ ಪ್ರೆಸಸ್ ಲಿಮಿಟೆಡ್, ಕವಿತಾ ದತ್ತ ಜಂಟಿ ಆಡಳಿತ ನಿರ್ದೇಶಕರು, ಕೆಸಿಪಿ ಸಿಮೆಂಟ್ಸ್, ನಿರೂಪ್ ರೆಡ್ಡಿ–ಸಂಸ್ಥಾಪಕರು, ಎನ್‌ಎ ಆರ್ಕಿಟೆಕ್ಟ್ಸ್,ಶೈಲಜಾ ಕಿರಣ್–ಆಡಳಿತನಿರ್ದೇಶಕರು, ಮಾರ್ಗದರ್ಶಿ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್–ಮೈಸೂರು ರಾಜವಂಶಸ್ಥರು ಹಾಗೂ ಮೈಸೂರು–ಕೊಡಗು ಲೋಕಸಭೆ ಕ್ಷೇತ್ರದ ಸದಸ್ಯರು.

# ಬೈಕ್‌ಗಳ ನಡುವೆ ಡಿಕ್ಕಿ: ಓರ್ವ ಸಾವು, ಇನ್ನೋರ್ವನಿಗೆ ಗಾಯ

**ಕಲಬುರಗಿ:** ಎರಡು ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಓರ್ವ ಮೃತಪಟ್ಟು, ಇನ್ನೋರ್ವ ಗಾಯಗೊಂಡಿರುವ ಘಟನೆ ನಗರ ಹೊರವಲಯದ ಕೇಂದ್ರ ಕಾರಾಗೃಹ ಹತ್ತಿರ ನಡೆದಿದೆ.

ಕೇಂದ್ರ ಕಾರಾಗೃಹ ಹತ್ತಿರವಿರುವ ಪೂರ್ಣಾನಂದ ಹೋಟೆಲ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ನಾಗನಹಳ್ಳಿ ಗ್ರಾಮದ ಶಿವರಾಜ ತಂದೆ ಮಲ್ಲಿಕಾರ್ಜುನ ಹೊಸಮನಿ ಎಂಬುವವರು ಮೃತಪಟ್ಟಿದ್ದು, ಸಂಗಮೇಶ ಎಂಬುವವರಿಗೆ ಗಾಯಗಳಾಗಿವೆ. ಇವರು ಪೂರ್ಣಾನಂದ ಹೋಟೆಲ್‌ನಿಂದ ಕಲಬುರಗಿ ಕಡೆಗೆ ಬೈಕ್ ಮೇಲೆ ಹೋಗುತ್ತಿದ್ದಾಗ ಕಲಬುರಗಿ ಕಡೆಯಿಂದ ಜೇವರ್ಗಿ ಕಡೆಗೆ ಹೋಗುತ್ತಿದ್ದ ಬೈಕ್ ಡಿಕ್ಕಿಯಾಗಿ ಗಾಯಗೊಂಡಿದ್ದರು. ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಶಿವರಾಜ ಹೊಸಮನಿ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಈ ಸಂಬಂಧ ಸಂಚಾರ ಪೊಲೀಸ್ ಠಾಣೆ–1ರಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State